ಹೊಸ ಮನುಷ್ಯ

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೫ ಜುಲೈ-೨೦೦೫ ಸಂಚಿಕೆ-೧೨



ಸಂಪೂರ್ಣ ಕ್ರಾಂತಿಯ ಕಹಳೆ ಮತ್ತೆ ಮೊಳಗಬೇಕಿದೆ

ಜನಪದ ವಿಚಾರದಲ್ಲಿ

ಜುಲೈ–೨೦೦೫.

ಜನಪದ ವಿಚಾರ
ತಿಂಗಳ ವೈಚಾರಿಕ ಡೈಜೆಸ್ಟ್

ಜುಲೈ-೨೦೦೫
ಸಂಪುಟ-೫
ಸಂಚಿಕೆ-೧೨

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧ ೪೩೧
ಮಂಡ್ಯ ಜಿಲ್ಲೆ

(08236)298754
e-mail-janapada@yahoo.com
www.janapada.org

ಬೆಟ್ಟಸಾಲು

ಕಣ್ಣಸ್ನೇಹಕ್ಕಿರುವ ಬೆಟ್ಟಸಾಲು
ಕಿಟಕಿಯಿಂದಲೆ ತೋರುವುದು
ದೂರವೂ ಅಲ್ಲ ಹತ್ತಿರವೂ ಅಲ್ಲ
ಸದಾ ಜೊತೆಯಂತಿರುವುದು
ಸಂಜೆ ಕರಗಿದ ಮೇಲೆ
ಕತ್ತಲಲ್ಲಿ ಮುಳುಗುವುದು
ಮಂಜು ಮುತ್ತಿದ ಮುಂಜಾನೆ
ಬೇಗ ಮುಖ ತೋರದು
ಆದರೂ ಇದ್ದೇ ಇರುವುದು
ಹಗಲೂ ಇರುಳೂ
ದಿನ ದಿನ ನಿಲ್ಲದೆ ಉರುಳಿದರೂ
ಅಚ್ಚರಿ ಹೆಚ್ಚುತ್ತ ಉಳಿಯುವುದು
ಕಣ್ಣು ಜಗವ ಕಿರಿದಾಗಿಸಿದಂದು
ಬೆಟ್ಟ ಜಾರಿ ಹೋಗುವುದು
ರೂಢಿ ನೋಟವನು ಬರಿದಾಗಿಸಿದಂದು
ಸಾಲು ಸವೆದಂತಾಗುವುದು.

-ಎಸ್. ಮಂಜುನಾಥ್

ಈ ವರ್ಷ ಪ್ರಕಟವಾಗಿರುವ 'ಕಲ್ಲ ಪಾರಿವಾಳಗಳ ಬೇಟ' ಎಂಬ ಕವನ ಸಂಕಲನದಿಂದ ಆಯ್ದುದು.

ವಿಚಾರ ದೀಪ್ತಿ

ಆಧುನಿಕ ಸಮಾಜದಲ್ಲಿ ಮಹಿಳೆಯರು ಅಪಾಯದ ಪರಿಸ್ಥಿತಿಗೆ ಒಳಗಾಗಿರುವುದಕ್ಕೆ ಅವರು ಈ ದಿನಗಳಲ್ಲಿ ಧರಿಸುವ ಉನ್ಮಾದಕ ವೇಷ-ಭೂಷಣವೂ ಒಂದು ಕಾರಣವಾಗಿದೆ. ಕಳೆದು ಹೋದ ವರ್ಷಗಳಲ್ಲಿಯ ಚಲನಚಿತ್ರಗಳಲ್ಲಿ ಕ್ಯಾಬರೆ ನೃತ್ಯಗಾರ್ತಿಯರು ಮತ್ತು ಮಾಟಗಾತಿಯರು ಧರಿಸುತ್ತಿದ್ದ ವೇಷ-ಭೂಷಣಗಳು ಇಂದು ಅನುಕರಣೆಗೆ ಬರುತ್ತಿವೆ. ಪ್ಯಾಷನ್ ಷೋಗಳಲ್ಲಿ ಪ್ರದರ್ಶಿತವಾಗುವ ಬಟ್ಟೆಗಳನ್ನು ಸಾಮಾನ್ಯ ಮಹಿಳೆ ಬೀದಿಯಲ್ಲಿ ಧರಿಸಿ ಓಡಾಡಲು ಸಾಧ್ಯವಿಲ್ಲ. ಬದಲಿಗೆ ಈ ಪ್ಯಾಷನ್ ಪ್ರದರ್ಶನಗಳು ಪ್ರೇಕ್ಷಕರ ಮೇಲೆ, ಅದರಲ್ಲಿಯೂ ವಿಶೇಷವಾಗಿ ಪುರುಷ ಪ್ರೇಕ್ಷಕರ ಮೇಲೆ ಅಹಿತಕರವಾದ ಪರಿಣಾಮವನ್ನು ಬೀರುತ್ತವೆ. ಆ ವೇಷ ಭೂಷಣಗಳು ಕಾಮೋನ್ಮಾದವನ್ನು ಪ್ರಚೋದಿಸುವುದಲ್ಲದೆ ಅವರಲ್ಲಿ ಲೈಂಗಿಕ ಇಚ್ಛಾಶಕ್ತಿಯನ್ನು ಉನ್ಮತ್ತಗೊಳಿಸುತ್ತದೆ. ಈ ಬಗೆಯ ಬಯಕೆಗಳನ್ನು ನಿಯಂತ್ರಿಸಲು ಸಾಧ್ಯವಾಗದೆ ಅವರು ರಸ್ತೆಯಲ್ಲಿ ಹೋಗುವ ಅಮಾಯಕ ಮತ್ತು ಅಜಾಗರೂಕ ಮಹಿಳೆಯರ ಮೇಲೆ ದಾಳಿ ಮಾಡುತ್ತಾರೆ. ಇದೇ ರೀತಿ ದೂರದರ್ಶನದಲ್ಲಿ ಘಾಂಟಾದಂಥ ಪಾನೀಯ ಜಾಹಿರಾತುಗಳು ಬಹು ಕೀಳು ಅಭಿರುಚಿಯನ್ನು ಹುಟ್ಟಿಸುತ್ತವೆ. ಓರ್ವ ಸಿನಿಮಾ ನಟಿ ಕಿತ್ತಳೆವರ್ಣದ ಬಿಗಿಯಾದ ಟಿ ಷರ್ಟಧರಿಸಿ ಅಶ್ಲೀಲ ಹಾಡುಗಳಿಗೆ ತಕ್ಕಂತೆ ಕುಣಿಯುವ ಅವಳು ಅತ್ಯಾಚಾರಕ್ಕೊಳಗಾಗುವ ಸಾಧ್ಯತೆ ಅವಳ ಪ್ರಸಿದ್ಧಿಯ ಕಾರಣ ಕಡಿಮೆ. ಆದರೆ ಪ್ರಸಿದ್ಧವಿಲ್ಲದಿರುವ ಬೀದಿಯಲ್ಲಿಯ ಸಾಮಾನ್ಯ ಮಹಿಳೆಯ ಗತಿಯೇನು? ಆ ಜಾಹಿರಾತುಗಳ ಮೂಲಕ ಸಿನಿಮಾನಟಿ ಪುರುಷ ಪ್ರೇಕ್ಷಕರಿಗೆ ಬಿತ್ತರಿಸುವ ಪಾಶವಿಕ ಸಂದೇಶವು ಪ್ರತಿಯೊಬ್ಬ ಹೆಂಗಸು ಲೈಂಗಿಕಾಸಕ್ತಿಯ ವಸ್ತುವೆಂಬ ವಿಚಾರವನ್ನು ಪುರುಷರ ಮನದಲ್ಲಿ ಮೂಡಿಸುತ್ತದೆ. ಇದಕ್ಕೆಲ್ಲಾ ಅನೇಕ ಮಹಿಳೆಯರೆ ಕಾರಣವೆಂದು ನಾನು ಭಾವಿಸುತ್ತೇನೆ. ವೇಷಭೂಷಣವು ಆಯಾ ವ್ಯಕ್ತಿಯು ವ್ಯಕ್ತಿತ್ವವನ್ನು ಬಹಿರಂಗಗೊಳಿಸುತ್ತದೆ. ಸುಮಾರು ೪೦-೫೦ವರ್ಷಗಳ ಹಿಂದೆ ನಮ್ಮ ತಾಯಂದಿರು ಯುವತಿಯರಿದ್ದಾಗ ಯಾವುದೇ ಅತ್ಯಾಚಾರದ ಪ್ರಕರಣಗಳು ಇರಲಿಲ್ಲ. ಇಂದಿನ ಮಹಿಳೆಯರು ಯಾವ ಪ್ರಕಾರದ ಬಟ್ಟೆಗಳನ್ನು ಧರಿಸುವ ಅಭಿರುಚಿಯನ್ನು ಬೆಳಸಿಕೊಂಡಿದ್ದಾರೊ ಅದು ಭವಿಷ್ಯತ್ತಿನಲ್ಲಿ ಒಳ್ಳೆಯದಾಗುವಂಥದಲ್ಲ. ಇನ್ನು೨೦ವರ್ಷಗಳ ನಂತರ ನಮ್ಮ ಹೆಣ್ಣು ಮಕ್ಕಳು ಯಾವ ಪ್ರಕಾರದ ಬಟ್ಟೆ ಧರಿಸಬಹುದೆಂದು ಊಹಿಸಿರಿ. ಆ ಊಹೆ ಪ್ರತಿಯೊಬ್ಬರ ಕಲ್ಪನೆಗೆ ಬಿಟ್ಟದ್ದು.

-ಆರ್.ಸುಮತಿ

ಸಂಪೂರ್ಣ ಕ್ರಾಂತಿಯ ಕಹಳೆ ಮತ್ತೆ ಮೊಳಗಬೇಕಿದೆ

–ಸುರೇಂದ್ರ ಕೌಲಗಿ

ಕಾಲಗತಿಯ ವಶವಾಗಿ ನಿಶ್ಕ್ರಿಯವೂ, ನಿಸ್ಪಂದಿತವೂ, ನಿಃಸಹಾಯಕವೂ, ನಿರಾಶಯುತವೂ ಆಗುತ್ತಿರುವ ಭಾರತೀಯ ಸಮಾಜ ತನ್ನ ಜಡತ್ವವನ್ನು ಬಿಸುಟು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಇಂದು ಬೆಳೆದು ನಿಂತಿರುವ ಅನುಕೂಲಸಿಂಧು ರಾಜಕಾರಣದ ವಿರುದ್ಧ, ಜಾಗತಿಕರಣದ ದುಷ್ಪರಿಣಾಮದ ವಿರುದ್ಧ, ಬೆಳೆಯುತ್ತಿರುವ ನಿರುದ್ಯೋಗದ ವಿರುದ್ಧ, ಮುಕ್ತ ಮಾರುಕಟ್ಟೆಯ ಬಗೆಗಿನ ಅಜಾಗರೂಕತೆಯ ವಿರುದ್ಧ, ಹೆಚ್ಚುತ್ತಿರುವ ಕೋಮುವಾದದ ವಿರುದ್ಧ ಅಸಮ್ಮತಿಯನ್ನೂ, ಅಸಂತೋಷವನ್ನೂ ಅಸಹಕಾರವನ್ನೂ ಪರಿಣಾಮಕಾರಿಯಾಗಿ ವ್ಯಕ್ತಪಡಿಸಲು "ಸಂಪೂರ್ಣ ಕ್ರಾಂತಿ"ಯ ಕಹಳೆಯನ್ನು ಈಗ ಮತ್ತೆ ಮೊಳಗಿಸಬೇಕಿದೆ; ತನ್ಮೂಲಕ ಜಾಣ ಕಿವುಡನ್ನೂ, ಜಾಣ ಕುರುಡನ್ನೂ ಪ್ರದರ್ಶಿಸುತ್ತಿರುವ ದೇಶದ ನೀತಿ ನಿರೂಪಕರ, ವ್ಯವಸ್ಥೆಯಆಯಕಟ್ಟಿನ ಸ್ಥಾನದಲ್ಲಿರುವ ವಿವಿಧ ಬಗೆಯ ನಾಯಕರ ಕಿವಿಯನ್ನೂ, ಕಣ್ಣನ್ನೂ ತೆರೆಯಿಸಬೇಕಿದೆ. ಸಂಪೂರ್ಣ ಕ್ರಾಂತಿಯ ಕಹಳೆಯನ್ನು ಮೊಳಗಿಸಲು ಸಕಾಲವಾಗಿದೆ. ಈಗ್ಗೆ ಸರಿಯಾಗಿ ಮೂವತ್ತೊಂದು ವರ್ಷಗಳ ಹಿಂದೆ ೧೯೭೪ರ ಜೂನ್ ೫ ರಂದು ಲೋಕನಾಯಕ ಜಯಪ್ರಕಾಶ್ ನಾರಾಯಣ್ ಬಿಹಾರ ರಾಜ್ಯದ ರಾಜಧಾನಿ ಪಾಟ್ನಾದ ಗಾಂಧೀ ಮೈದಾನದಲ್ಲಿ ಯಾವ ಯಾವ ಕಾರಣಗಳಿಂದಾಗಿ ಸಂಪೂರ್ಣ ಕ್ರಾಂತಿಯ ಕಹಳೆಯನ್ನು ಮೊಳಗಿಸಿ ಕೊಳೆತು ಹೋದ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಕಿತ್ತೆಸೆದು ಅವುಗಳ ಸ್ಥಾನದಲ್ಲಿ ಜನತಾಶಕ್ತಿ ಆಧಾರಿತ ಹೊಸ ಬಗೆಯ ವ್ಯವಸ್ಥೆಯ ನಿರ್ಮಾಣಕ್ಕೆ ಕರೆಯಿತ್ತಿದ್ದರೋ ಅಂಥದೇ ನೂರಾರು ಕಾರಣಗಳು ಇಂದು ದೇಶದ ಜನಜೀವನದಲ್ಲಿ ನಗ್ನ ತಾಂಡವವಾಡುತ್ತಿವೆ.

ಅಂದು ಜಯಪ್ರಕಾಶ್ ನಾರಾಯಣರು ಗಾಂಧೀ ಮೈದಾನದಲ್ಲಿ ಎತ್ತಿದ್ದ ಭ್ರಷ್ಟಾಚಾರದ ವಿಷಯ ಇಂದು ಹೆಚ್ಚಿನ ತೀವ್ರತೆ ಪಡೆದಿದೆ; ರಾಜಕಾರಣಿಗಳ ನೈತಿಕ ಪತನದ ವಿಷಯ ಇನ್ನೂ ಹೆಚ್ಚಿನ ತೀವ್ರತೆ ಪಡೆದಿದೆ; ರಾಜಕಾರಣದ ಅಪರಾಧೀಕರಣ ರಾಜಾರೋಷವಾಗಿ ಸಾಗುತ್ತಿದೆ; ಸಮ್ಮಿಶ್ರ ಸರ್ಕಾರದಂಥ ರಚನಾ ಪದ್ಧತಿಯನ್ನು ಜಾರಿಗೆ ತರುವುದರ ಮೂಲಕ ದೇಶದ ರಾಜಕೀಯ ಪಕ್ಷಗಳು ತಾವು ಜನತಾ ವಿಶ್ವಾಸವನ್ನೂ, ಜನತಾ ಬೆಂಬಲವನ್ನೂ ಕಳೆದು ಕೊಂಡಿರುವುದನ್ನು ಜಾಹಿರುಗೊಳಿಸಿವೆ; ಇಪ್ಪತ್ತೊಂದನೆ ಶತಮಾನದ ಮುಕ್ತಾಯದ ವೇಳೆಗೆ ದೇಶವನ್ನು

ವಿಶ್ವದ ಅತ್ಯಂತ ಬಲಿಷ್ಠ ಔದ್ಯೋಗಿಕ ಹಾಗೂ ಬಲಾಢ್ಯಸೈನ್ಯ ಶಕ್ತಿಯ ರಾಷ್ಟ್ರವನ್ನಾಗಿ ಮತ್ತು ಅತ್ಯಂತ ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡುವ ಉದ್ದೇಶದಿಂದ ದೇಶದ ಇಡೀ ಪರಿಸರವನ್ನೇ ಮೂರಾಬಟ್ಟೆಯನ್ನಾಗಿ ಮಾಡಲಾಗುತ್ತಿದೆ; ಸಾಮಾಜಿಕ ಸಂಸ್ಕೃತಿಯನ್ನು ಉತ್ತರೋತ್ತರ ಉತ್ತಮ ಪಡಿಸಬೇಕಾಗಿರುವ ಶಿಕ್ಷಣವನ್ನು ವಾಣಿಜ್ಯ ಸರಕನ್ನಾಗಿ ಮಾಡಿ ಅದು ತನ್ನ ಅಂತಶಕ್ತಿಯನ್ನು ಕಳೆದುಕೊಳ್ಳುವಂತೆ ಮಾಡಲಾಗುತ್ತಿದೆ; ವಿದ್ಯಾರ್ಜನೆ ಮಾಡಬೇಕಾಗಿರುವ ವಿದ್ಯಾರ್ಥಿಗಳನ್ನು ಮಾರುಕಟ್ಟೆಯ ಸರಕನ್ನಾಗಿ ಮಾಡಲಾಗುತ್ತಿದೆ. ಬ್ರಿಟಿಷ್ ಸಾಮ್ರಾಜ್ಯದ ಸ್ಥಾನದಲ್ಲಿ ಇಂಗ್ಲೀಷ್ ಭಾಷೆಯ ಸಾಮ್ರಾಜ್ಯವನ್ನು ಪ್ರತಿಷ್ಠಿತಗೊಳಿಸುವುದರ ಮೂಲಕ ದೇಶಿಯ ಭಾಷೆಗಳನ್ನು ಮಣ್ಣುಗೂಡಿಸಿ ಮಕ್ಕಳ ನೈಜ ವ್ಯಕ್ತಿತ್ವ ವಿಕಾಸದ ಮೇಲೆ ಚಪ್ಪಡಿಯನ್ನೆಳೆಯಲಾಗುತ್ತಿದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ತಮ್ಮ ಮೂಗಿನ ವರೆಗೆ ಸಾಲದಲ್ಲಿ ಮುಳುಗಿವೆ.

ದೇಶದಾದ್ಯಂತ ಹಿಂಸಾಚಾರ ಹರಡಿದೆ; ಆತ್ಮಹತ್ಯೆಗಳಾಗುತ್ತಿವೆ; ಪ್ರತಿಯೊಬ್ಬ ನಾಗರಿಕ ಸಾಲದ ಸುಳಿಯಲ್ಲಿ ಸಿಕ್ಕು ಹಾಕಿಕೊಂಡಿದ್ದಾನೆ; ದೇಶದ ಕೆಲ ರಾಜ್ಯಗಳು, ಮುಖ್ಯವಾಗಿ ಈಶಾನ್ಯ ದಿಕ್ಕಿನಲ್ಲಿರುವ ರಾಜ್ಯಗಳು ಭಾರತ ಒಕ್ಕೂಟದಿಂದ ಹೊರಹೋಗಲು ಪ್ರಯತ್ನಿಸುತ್ತಿವೆ; ಸರ್ಕಾರಗಳ ಆದಾಯದ ಬಹುಭಾಗವು ಆಡಳಿತ ವರ್ಗದವರ ಹೊಟ್ಟೆಗೆ, ಸುಖಜೀವನಕ್ಕೆ ಸಾಲದೆ ಬರುತ್ತಿದೆ.

ಇಂಥ ಸಾವಿರಾರು ಸಮಸ್ಯೆಗಳು ದೇಶದ ಜೀವನವನ್ನು ಕಿತ್ತು ತಿನ್ನುತ್ತಿರುವಾಗ ಜನತೆ ಗರ ಬಡಿದಂತೆ ಕುಳಿತಿದೆಯಲ್ಲಾ? ಏಕಿಂಥ ಜಡತ್ವ? ದೇಶ ಅನುಭವಿಸುತ್ತಿರುವ ನೋವುಗಳನ್ನು, ಸಮಸ್ಯೆಗಳನ್ನು ಬಗೆಹರಿಸಲು ಆಗಲೆ ದೇಶದ ಅನೇಕ ಯುವಕರು ಕೋವಿಯನ್ನು ಆಶ್ರಯಿಸಿದ್ದಾರೆ. ಕಾಲಕಳೆದಂತೆ ಕೋವಿಯತ್ತ ಆಕರ್ಷಿತರಾಗುವ ಯುವಕರ ಸಂಖ್ಯೆ ಹೆಚ್ಚುತ್ತಾ ಹೋಗುತ್ತಿದೆ.

ಈ ಹಿಂಸಾಪ್ರವೃತ್ತಿಯನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮವೇನೆಂದರೆ ಕೋವಿಗೆ ಉತ್ತರವಾಗಿ ಕೋವಿ ಎಂಬ ಕ್ರಮವನ್ನು. ಹಿಂಸೆಗೆ ಹಿಂಸೆ ಉತ್ತರವಲ್ಲವೆಂದು ಬುದ್ಧ, ಮಹಾವೀರರಂಥವರೆಲ್ಲ ಹೇಳಿ ಹೋದದ್ದು ನಮ್ಮ ಸರ್ಕಾರದ ಮನೋಧರ್ಮಕ್ಕೆ ಒಗ್ಗದೇ ಹೋಗಿದೆ. ಆದ್ದರಿಂದ ನಮ್ಮ ಸರ್ಕಾರಗಳು ದಿನೇ ದಿನೇ ಹಿಂಸೆಯತ್ತ ವಾಲುತ್ತಿವೆ. ಅವೇ ಭಯೋತ್ಪಾದಕರ ಸ್ಥಾನವನ್ನು ಆಕ್ರಮಿಸುತ್ತಿವೆ!

ಪರಿಸ್ಥಿತಿ ಹೀಗಿರುವಾಗ ನಮ್ಮ ಮುಂದೆ ಇರುವ ದಾರಿ ಒಂದೇ. ಅದುವೆ ಸಂಪೂರ್ಣಕ್ರಾಂತಿಯ ಪ್ರಕ್ರಿಯೆಯನ್ನು ಪ್ರಾರಂಭಿಸುವುದು.

ಇತ್ತೀಚೆಗಷ್ಟೇ ನಮ್ಮ ದೇಶದ ಕೆಲ ರಾಜಕಿಯ ನಾಯಕರು ೧೯೭೦ರ

ತುರ್ತುಪರಿಸ್ಥಿಯ ಘಟನೆಯನ್ನು ದೇಶವು ಜ್ಞಾಪಿಸಿಕೊಳ್ಳುವಂತೆಯೂ ಮತ್ತು ಅಂಥ ಪರಿಸ್ಥತಿ ಪುನಃ ಮರುಕಳಿಸುವುದಿಲ್ಲವೆಂದೂ ಹೇಳಲೂ ಪ್ರಯತ್ನಿಸಿದರು. ಆದರೆ ದೇಶ ಇಂದು ಎಂಥ ಭೀಕರ ಸಮಸ್ಯೆಗಳನ್ನೊಳಗೊಂಡ ಜ್ವಾಲಾಮುಖಿ ಪರ್ವತದ ಮೇಲೆ ಕುಳಿತಿದೆ ಎಂಬುದನ್ನು ಎಲ್ಲ ರಾಜಕಾರಣಿಗಳು ಮರೆತು ಬಿಟ್ಟಿದ್ದಾರೆ. ಈಗಾಗಲೇ ದೇಶದ ವಿವಿಧ ಭಾಗಗಳಲ್ಲಿ ಜನರು ಒಂದಲ್ಲ ಒಂದು ಸಾಮಾಜಿಕ, ಆರ್ಥಿಕ, ರಾಜಕಿಯ ಸಮಸ್ಯೆಯನ್ನು ತಮ್ಮ ಕೈಗೆತ್ತಿಕೊಂಡು ಅದರ ಪರಿಹಾರಕ್ಕಾಗಿ ಕಾನೂನು ಮತ್ತು ವ್ಯವಸ್ಥೆಯನ್ನು ಮುರಿಯುತ್ತಿದ್ದಾರೆ. ಯಾವುದೇ ಒಂದು ಚುನಾವಣೆ ಶಾಂತಿಯುತವಾಗಿ ನಡೆಯುತ್ತಿಲ್ಲ. ಇತ್ತೀಚೆಗೆ ಬಿಹಾರದಲ್ಲಿ ಮತ್ತು ಇತರ ರಾಜ್ಯಗಳಲ್ಲಿ ನಡೆದ ಚುನಾವಣೆಗಳ ಕಾಲಕ್ಕೆ ಅಲ್ಲಿ ಎಂಥ ಪರಿಸ್ಥಿತಿ ನಿರ್ಮಾಣಗೊಂಡಿತ್ತೆಂದರೆ ದೇಶ ಪುನಃ ತುರ್ತುಪರಿಸ್ಥಿತಿಯತ್ತ ಹೋಗುತ್ತಿದೆಯೇನೋ ಎಂದೆನಿಸುತ್ತಿತ್ತು. ಚುನಾವಣೆ ನಡೆಸಲು ಪೋಲಿಸರು, ಅರೆಸೈನಿಕರು ಮತ್ತು ಸೈನಿಕರ ಸೇವೆಯನ್ನು ಬಳಸಲಾಗಿತ್ತು. ಪ್ರಜಾತಾಂತ್ರಿಕವಾಗಿ ಶಾಂತಿಯತವಾಗಿ ಚುನಾವಣೆ ನಡೆಯಬೇಕಾದಡೆಯಲ್ಲೆಲ್ಲ ಭಯದ ವಾತಾವರಣ ಆವರಿಸಿಕೊಂಡಿತ್ತು. ಇಂಥದೇ ಭಯಾನಕ ಸ್ಥಿತಿ ಮುಂಬರುವ ಚುನಾವಣೆಗಳಲ್ಲೂ ಇದ್ದರೆ ಅದು ಆಶ್ಚರ್ಯದ ಸಂಗತಿಯಾಗಲಾರದು, ಬದಲಿಗೆ ಅದು ಸಹಜ ಸಂಗತಿಯೆಂದೇ ಮತದಾರರು ಸ್ವೀಕರಿಸಬಹುದು. ಇಷ್ಟರ ಮಟ್ಟಿಗೆ ನಮ್ಮ ಚುನಾವಣೆಗಳು ಮತ್ತು ಹಿಂಸೆ ಸಂಲಗ್ನಗೊಂಡಿವೆ.

ದಿನದಿನಕ್ಕೆ ಕಾರ್ಯಾಂಗದ ಸ್ಥಾನವನ್ನು ನ್ಯಾಯಾಂಗವೂ, ನ್ಯಾಯಾಂಗದ ಸ್ಥಾನವನ್ನು ಬಹುಮತ ಅಥವಾ ಬಹುಸಂಖ್ಯೆಯೂ, ಕೆಲವೊಂದು ಸಲ ಅಲ್ಪಸಂಖ್ಯೆ ಎಂಬ ಶಕ್ತಿಯೂ ಆಕ್ರಮಿಸಿಕೊಳ್ಳುತ್ತಿದೆ. ಇದರ ಪರಿಣಾಮವಾಗಿ ಸಾಮಾಜಿಕ ಅಶಾಂತಿ ಉತ್ಪನ್ನಗೊಳ್ಳುತ್ತಲಿದೆ.

ಜಯಪ್ರಕಾಶರು ಹೇಳಿರುವ ಈ ಮಾತು ಇಲ್ಲಿ ಚೆನ್ನಾಗಿ ಅನ್ವಯಿಸುತ್ತದೆ. ಅವರು ಹೇಳಿರುವುದೇನೆಂದರೆ "ಶಕ್ತಿಯೆಂಬುದು ಹಬೆಯಂತೆ, ಅದನ್ನು ಸರಿಯಾಗಿ ಉಪಯೋಗಿಸದಲ್ಲಿ ಮಹಾ ರೈಲನ್ನೇ ಓಡಿಸಬಹುದು. ಹಾಗಿಲ್ಲವಾದಲ್ಲಿ ಹಬೆ ಸಂಗ್ರಹಿತವಾಗಿರುವ ಕವಚವೇ ಸಿಡಿದು ನುಚ್ಚು ನೂರಾಗುವುದು" ಇಂದು ಇಂಥ ಸ್ಥಿತಿ ದೇಶದಲ್ಲಿ ನಿರ್ಮಾಣಗೊಳ್ಳುತ್ತಿದೆ. ಜನತೆಯ ಅಸಮಾಧಾನ. ಅಸಂತೋಷ ತುಂಬಿ ತುಳುಕುವ ಪರಿಸ್ಥತಿಯತ್ತ ಸಾಗುತ್ತಿದೆ.

ಅವು ಸ್ಫೋಟಗೊಳ್ಳುವ ಮುನ್ನ ಜನತಾಶಕ್ತಿ ರಚನಾತ್ಮಕ ಕಾರ್ಯಗಳಲ್ಲಿ ತೊಡಗುವಂತೆ ಜಯಪ್ರಕಾಶರಿಂದ ಪ್ರತಿಪಾದಿತಗೊಂಡಿರುವ "ಸಂಪೂರ್ಣಕ್ರಾಂತಿಯ ಮೂಲಕ ಮಾಡದಿದ್ದರೆ ಭವಿಷ್ಯದಲ್ಲಿ ದೇಶವು ಪ್ರಪಾತಕ್ಕೆ ಬೀಳಬಹುದು. ಇಂಥದೇ

ಕುಪರಿಸ್ಥಿತಿ ೧೯೭೫ರಲ್ಲಿ ಇತ್ತು. ಆ ಪರಿಸ್ಥಿತಿಯ ಸುಧಾರಣೆಗಾಗಿ ಜಯಪ್ರಕಾಶ ನಾರಾಯಣರು ೧೯೭೪ರ ಜೂನ್ ೫ ರಂದು ಪಾಟ್ನಾದ ಗಾಂಧೀ ಮೈದಾನದಲ್ಲಿ ಸೇರಿದ್ದ ವಿರಾಟ್ ಜನಸಮುದ್ರದ ಸಮ್ಮುಖದಲ್ಲಿ ಸಂಪೂರ್ಣಕ್ರಾಂತಿಯ ವಿಚಾರವನ್ನು ಮುಂದಿಟ್ಟರು, ಆಗ ದೇಶದಲ್ಲಿ ರಾಜಕೀಯ, ಸಾಮಾಜಿಕ ವಿಷಯಗಳ ಬಗ್ಗೆ ಜನರಲ್ಲಿ ಮನೆಮಾಡಿದ್ದ ಅಸಂತೋಷದ ಕಾರಣದಿಂದಾಗಿ ಇಡೀ ದೇಶವೇ ಸಂಪೂರ್ಣಕ್ರಾಂತಿಯ ವಿಚಾರವನ್ನು ಮರುಯೋಚನೆಯಿಲ್ಲದೆ ಅಂಗೀಕರಿಸಿತು. ಇದರ ಫಲವಾಗಿ ಜಯಪ್ರಕಾಶರು ೧೯೭೫ ಜೂನ್೨೬ರಿಂದ ನವೆಂಬರ್ ಕೊನೆವರೆಗೆ ಚಂಡಿಗಢದಲ್ಲಿ ಏಕಾಂತ ಸೆರೆಮನೆ ವಾಸ ಅನುಭವಿಸಬೇಕಾಯಿತು. ಆಗ ಅವರು ಬರೆದಿರುವ ತಮ್ಮ ಸೆರೆಮನೆಯ ದಿನಚರಿಯಲ್ಲಿ ಜುಲೈ ೨೧ ರಂದು ಬರೆದಿರುವ ಮಾತುಗಳು ಈಗಲೂ ಮನನೀಯವಾಗಿದೆ. "ನನ್ನ ಪ್ರಪಂಚ ನುಚ್ಚುನೂರಾಗಿ ಸುತ್ತಲೂ ಬಿದ್ದಿದೆ. ನನ್ನ ಜೀವಮಾನದಲ್ಲಿ ಮತ್ತೆ ಅದು ಕೂಡಿಕೊಳ್ಳುವುದನ್ನು ನೋಡಲಾರೆ ಎಂಬ ಭಯ ನನಗಿದೆ. ನನ್ನ ಕಿರಿಯ ಬಂಧುಗಳು ಅದನ್ನು ಕಂಡಾರೋ ಎಂದೂ ಹೇಳಲಾರೆ!".

ಈಗ ನಮ್ಮ ದೇಶದ ಪರಿಸ್ಥಿತಿ ಹೇಗಿದೆ? ತುರ್ತುಪರಿಸ್ಥಿತಿಯ ಶಾಸನಗಳಿಲ್ಲವೆನ್ನುವುದೊಂದನ್ನು ಬಿಟ್ಟರೆ ಇನ್ನು ದೇಶದ ಎಲ್ಲ ಕ್ಷೇತ್ರಗಳಲ್ಲಿ ಗೊಂದಲ, ಅಶಿಸ್ತು, ಅಂಧಕಾರ, ಹಾಹಾಕಾರ, ಹಿಂಸಾಚಾರ, ವಿಛಿದ್ರಕಾರಕ ಶಕ್ತಿಗಳ ಪ್ರದರ್ಶನ ಇತ್ಯಾದಿ ತುಂಬಿವೆ. ಆದ್ದರಿಂದ ಆಗ ಜೆ.ಪಿ.ಯವರು ತಮ್ಮ ಸುತ್ತ ಬಿದ್ದಿದ್ದ ನುಚ್ಚುನೂರಾದ ಪ್ರಪಂಚ ಒಂದುಗೂಡುವುದನ್ನು ತಮ್ಮ ಕಿರಿಯ ಬಂಧುಗಳು ಮುಂದೆ ಎಂದಾದರೂ ಕಂಡಾರೆಯೇ ಎಂದು ಹೇಳಿದ್ದು ಈಗ ನಿಜವಾಗಿಲ್ಲವೆ? ಜೆ.ಪಿ.ಯವರ "ಕಿರಿಯ ಬಂಧುಗಳಾದ" ಇಂದಿನ ಯುವಕರು ಯಾವ ಮನೋಸ್ಥಿತಿಯಲ್ಲಿದ್ದಾರೆಂದರೆ ಅವರು ಹಣದ ಹಿಂದೆ ಬೆನ್ನುಹತ್ತಿದ್ದಾರೆ; ಹೆಚ್ಚು ಹೆಚ್ಚು ಉತ್ತಮವಾದ ಅವಕಾಶಗಳನ್ನು ಪಡೆಯಲು ಹೆಗಲಿಗೆ ಹೆಗಲು ಹಚ್ಚಿ ಓಡುವ ಮರಣಾಂತಕ ಸ್ಪರ್ಧೆಯಲ್ಲಿ ತೊಡಗಿದ್ದಾರೆ. ಆದ್ದರಿಂದ "ನುಚ್ಚು ನೂರಾದ ಪ್ರಪಂಚ ಒಂದು ಗೂಡುವುದನ್ನು ಕಾಣಲಾರೆ ಎಂಬ ಜೆ.ಪಿ.ಯವರ ಮಾತು ನಿಜವಾಗುತ್ತಿದೆ.

೧೯೪೭ರಲ್ಲಿ ಸ್ವಾತಂತ್ರ್ಯ ಬಂತು. ಭಾರತೀಯರ ಸರ್ಕಾರ ರಚನೆಯಾಯಿತು, ಆದರೆ ಸ್ವತಃ ಭಾರತೀಯರು ನಿರ್ವೀರ್ಯ್ಯರಾದರು. ತಮ್ಮ ಚಿಂತನ ಶಕ್ತಿಯನ್ನು, ತಮ್ಮ ಕ್ರಿಯಾಶೀಲತೆಯನ್ನು ತಮ್ಮ ಕ್ರಿಯಾಸ್ವಾತಂತ್ರ್ಯವನ್ನು ತಮ್ಮದೆ ಸರಕಾರಕ್ಕೆ ತಮ್ಮ ಭೌತಿಕ ಸುಖಕ್ಕೆ ಪ್ರತಿಯಾಗಿ ಮಾರಿಕೊಂಡರು. ಇದರ ಫಲವಾಗಿ ಲೋಕಶಕ್ತಿ ಕ್ಷೀಣವಾಯಿತು, ರಾಜ್ಯಶಕ್ತಿ ಬಲಿಷ್ಠವಾಯಿತು. ವಿಕೇಂದ್ರಿಕರಣ

ಕೇಂದ್ರೀಕರಣಕ್ಕೆ ಶರಣಾಯಿತು; ಸ್ವದೇಶಿವ್ರತ ವಿದೇಶಿವ್ರತದ ಮುಂದೆ ಮಂಡಿಯೂರಿತು; ಪರಾರ್ಥಕ್ಕೆ ಮೀಸಲಾಗಬೇಕಿದ್ದ ರಾಜಕಾರಣ ಸ್ವಾರ್ಥಕ್ಕೆ ಮೀಸಲಾಯಿತು; ಸ್ವತಂತ್ರವಾಗಿ ರೂಪಿತವಾಗಬೇಕಿದ್ದ ವಿದೇಶ ನೀತಿ ವಿಶ್ವದ ಬಲಾಢ್ಯ ರಾಷ್ಟ್ರಗಳ ವಿದೇಶಿ ನೀತಿಯ ತೊತ್ತಾಯಿತು; ಐಕ್ಯತೆಗೆ ಸಾಧಕವಾಗಬೇಕಿದ್ದ ಧರ್ಮಗಳು ಬಾಧಕವಾದವು; ತತ್ವಾಧಾರಿತವಾಗಬೇಕಿದ್ದ ರಾಜಕಾರಣ ತತ್ವರಹಿತ ರಾಜಕಾರಣವಾಗಿ ಹೊರಹೊಮ್ಮತೊಡಗಿತು. ಇದೆಲ್ಲದರ ಪರಿಣಾಮವಾಗಿ ಪಂಚವಾರ್ಷಿಕ ಯೋಜನೆಗಳು ತಮ್ಮ ಉದ್ದೇಶಿತಗುರಿಗಳನ್ನು ಮುಟ್ಟಲಾರದೆ ತತ್ತರಿಸಿದವು. ವೀದೇಶಿ ವಿನಿಮಯದ ಸ್ಥಿತಿ ಅತ್ಯದ್ಭುತವಾಗಿ ಸುಧಾರಿಸಿದರೂ ಶ್ರೀಸಾಮಾನ್ಯನ ಜೀವನ ದುಸ್ತರಕರವಾಗಿಯೇ ಉಳಿಯಿತು.

ಮೇಲ್ಕಾಣಿಸಿದ ಸಂಗತಿಗಳು "ಸಂಪೂರ್ಣ ಕ್ರಾಂತಿಯ" ಕಹಳೆಯನ್ನು ಮತ್ತೆ ಮೊಳಗಿಸಲು ಪ್ರಚೋದಕವಾಗಿಲ್ಲವೆ? ಇನ್ನೂ ಎಷ್ಟು ಪ್ರಮಾಣದಲ್ಲಿ ಪಾಪದ ಕೊಡ ತುಂಬಬೇಕು? ಅದಕ್ಕಾಗಿ ನಾವು ಕಾಯುತ್ತ ಕುಳಿತರೆ ಆ ಪಾಪವೇ ನಮಗೆ ಶಾಪವಾದೀತಲ್ಲವೆ? ಆದ್ದರಿಂದ ಕಾಲ ಮಿಂಚುವ ಮುನ್ನ, ದೇಶದ ಇಂದಿನ ಒಟ್ಟಾರೆ ಪರಿಸ್ಥಿತಿ ಇನ್ನು ಹೆಚ್ಚು ಹದಗೆಡುವ ಮುನ್ನ ಜಯಪ್ರಕಾಶರ "ಕಿರಿಯ ಬಂಧುಗಳಾದ" ದೇಶದ ಯುವಕರು ಸಂಪೂರ್ಣಕ್ರಾಂತಿಯ ಕಹಳೆಯನ್ನು ತಮ್ಮ ಕೈಗೆತ್ತಿಕೊಂಡು ಅದರ ಧ್ವನಿಯನ್ನು ದೇಶದಾದ್ಯಂತ ಮೊಳಗಿಸಬೇಕಾಗಿದೆ.

ಜಯಪ್ರಕಾಶರು ತಾವು ಹೂಡಿದ್ದ ಸಂಪೂರ್ಣಕ್ರಾಂತಿಗೆ ಯುವಕರನ್ನೇ ಅವಲಂಬಿಸಿದ್ದರು. ಈ ಸಂದರ್ಭದಲ್ಲಿ ಜಯಪ್ರಕಾಶರು ಯುವಕರನ್ನು ಕುರಿತು ಹೇಳಿದ ಈ ಮಾತುಗಳು ಮಹತ್ವಪೂರ್ಣದ್ದಾಗಿವೆ.

"ನನ್ನ ಕಲ್ಪನೆಯ ಜನತಾ ಸರಕಾರ ಕೇವಲ ರಾಜನೀತಿಕ ವ್ಯವಸ್ಥೆಯಷ್ಟೇ ಅಲ್ಲ; ಅದೊಂದು ಜೀವನ ಶೈಲಿಯ ಹೊಸಕಲ್ಪನೆಯಾಗಿದೆ.

ಇವೆಲ್ಲ ನನ್ನ ಹಗಲುಗನಸುಗಳೆಂದು ಕೆಲವು ಜನರು ಹೇಳುತ್ತಾರೆ. ನಾನು ಅವರೊಡನೆ ವಾದ ವಿವಾದಕ್ಕೆ ಇಳಿಯುವುದಿಲ್ಲ. ಆದರೆ ಕನಸುಗಳನ್ನು ಕಾಣಲಾರದವರಿಂದ ಕ್ರಾಂತಿ ಎಂದಿಗೂ ಸಾಧ್ಯವಾಗಲಾರದು. ಕ್ರಾಂತಿಕಾರಿಯು ಸ್ವಪ್ನದರ್ಶಿಯಾಗದಿದ್ದರೆ ಹೊಸ ಸಮಾಜದ ಚಿತ್ರ ಹೇಗೆ ದೊರೆತೀತು? ನಾನು ಆ ಸ್ವಪ್ನಗಳನ್ನು ಸಾಕಾರಮಾಡುವ ಧ್ಯೇಯೋನ್ಮಾದದ ಯುವಕರ ಶೋಧದಲ್ಲಿದ್ದೇನೆ. ಯುವಕರೇ ಸಂಪೂರ್ಣಕ್ರಾಂತಿಯ ಎಂಜಿನ್ನು. ವಿದ್ಯಾರ್ಥಿಗಳಶಕ್ತಿಯಿಂದೊಡಗೂಡಿದ ಯುವಶಕ್ತಿಯೇ ನನ್ನನ್ನು ಈ ಆಂದೋಲನದಲ್ಲಿ ಎಳೆದುಕೊಂಡಿತ್ತು. ಯುವಕರಲ್ಲಿ ಆದರ್ಶಗಳಿಗಾಗಿ ಬಲಿದಾನಕೊಡುವ ಸಾಹಸ ವಿರುತ್ತದೆ ಮತ್ತು ತಮ್ಮ ಭವಿಷ್ಯವನ್ನು ಗಂಡಾಂತರದಲ್ಲಿ ನೂಕುವ ಉತ್ಸಾಹವಿರುತ್ತದೆ. ಆದ್ದರಿಂದ ನನಗೆ ಆ ಹೊಸ

ಮೌಲ್ಯಗಳ ವಾಹಕರ ಅವಶ್ಯಕತೆ ಇದೆ. ಸಾಮಾಜಿಕ ಕುರೀತಿಗಳ ಸ್ಪ್ರಶ್ಯಾಸ್ಪ್ರಶ್ಯತೆ, ವರದಕ್ಷಿಣೆ, ಜಾತಿಭೇದದ ವಿರುದ್ಧ ತರುಣರು ಹೋರಾಡಬಲ್ಲರು. ಅವರು ಸಂಘರ್ಷವನ್ನು ಮಾಡಿದ್ದಾರೆ ಮತ್ತು ಅದರಿಂದ ಭಾರತೀಯ ಸಮಾಜದಲ್ಲಿ ಪ್ರಗತಿಯೂ ಆಗಿದೆ. ಆದರೂ ಇನ್ನೂ ಬಾಕಿ ಇರುವ ಬಹಳ ಕೆಲಸವನ್ನು ಪೂರೈಸಲು ಯುವಕರು ಸಂಘಟಿತ ರೂಪದಿಂದ ಮುಂದೆ ಬರಬೇಕು, ಸಾಮಾಜಿಕ ಪರಿವರ್ತನದ ಗಾಡಿ ವೇಗವಾಗಿ ಚಲಿಸದಂತೆ ಆರ್ಥಿಕ, ರಾಜನೀತಿಕ ಪರಿವರ್ತನವೂ ಅದೇ ವೇಗದಿಂದ ಅದರ ಹಿಂದೆ ಬರುವುದು. ಸಂಪೂರ್ಣಕ್ರಾಂತಿಯ ನನ್ನ ಕಲ್ಪನೆಯನ್ನು ಭೂಮಿಯಮೇಲೆ ಇಳಿಸುವ ಸಾಮರ್ಥ್ಯ ಯುವಶಕ್ತಿಯ ಕೈಯಲ್ಲಿದೆ. ಆದರೆ ಆ ದಿನವನ್ನು ನೋಡಲು ನಾನು ಬದುಕಿ ಉಳಿಯಲಾರೆ. ಆದರೆ ಸಮಾಜದ ಅಂತಿಮ ವ್ಯಕ್ತಿ ಯಾವಾಗ ಮರ್ಯಾದೆಯಿಂದ ಜೀವನವನ್ನು ಬದುಕ ಬಲ್ಲನೋ-ತನ್ನ ಸಾಮರ್ಥ್ಯಕ್ಕನುಗುಣವಾಗಿ ದುಡಿಯುವನೋ ಮತ್ತು ತನ್ನ ಅವಶ್ಯಕತೆಗಳನ್ನು ಪೂರ್ತಿಯಾಗಿ ಪಡೆಯಬಲ್ಲನೋ-ಅಂದು ನನಗೆ ಸಂತೋಷವಾದೀತು".

ಸಂಪೂರ್ಣಕ್ರಾಂತಿಯ ಬಗ್ಗೆ ಇರುವ ಜಯಪ್ರಕಾಶ ನಾರಾಯಣರ ಈ ಕಲ್ಪನೆಯನ್ನು ದೇಶದ ಮುಂದೆ ಇಡುವ ಪ್ರಯತ್ನದ ಅಂಗವಾಗಿ ಜನಪದ ಸೇವಾ ಟ್ರಸ್ಟ್ ಕಳೆದ ಜನವರಿ ತಿಂಗಳಿನಿಂದ "ಸಂಪೂರ್ಣಕ್ರಾಂತಿ ವಿದ್ಯಾಲಯ"ವನ್ನು ನಡೆಸಿಕೊಂಡು ಬರುತ್ತಿದೆ. ಪ್ರತಿ ತಿಂಗಳು ಇಪ್ಪತ್ತು ಯುವಕರನ್ನು ಆಹ್ವಾನಿಸಿ, ಅವರನ್ನು ಮೂರು ದಿನಗಳ ಕಾಲ ಹೊಸ ಜೀವನ ದಾರಿ ಕೇಂದ್ರದಲ್ಲಿ ಇರಿಸಿ ಅವರಿಗೆ ಸಂಪೂರ್ಣಕ್ರಾಂತಿಯ ವಿಚಾರವನ್ನು ತಿಳಿಸುವ ಕೆಲಸವನ್ನು ಮಾಡಿಕೊಂಡು ಬರುತ್ತಿದೆ. ಈ ವಿದ್ಯಾಲಯದ ಕಾರ್ಯಕ್ರಮ ೨೦೦೫ ಡಿಸೆಂಬರ್‌ಗೆ ಮುಗಿಯುವುದು. ಈ ವರೆಗೆ ನಲವತ್ತು ಜನ ಯುವಕರು ಮತ್ತು ಇಪ್ಪತ್ತೇಳು ಜನ ಯುವತಿಯರು ಈ ವಿದ್ಯಾಲಯಕ್ಕೆ ಬಂದು ಸಂಪೂರ್ಣಕ್ರಾಂತಿಯ ವಿಚಾರದ ಪರಿಚಯ ಮಾಡಿಕೊಂಡಿದ್ದಾರೆ. ಮತ್ತು ಅವರಲ್ಲಿ ೫-೬ ಜನ ಸಂಪೂರ್ಣಕ್ರಾಂತಿಯ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಈ ವಿದ್ಯಾಲಯದ ಶಿಬಿರಗಳಲ್ಲಿ ಭಾಗವಹಿಸಲು ಹೆಚ್ಚು-ಹೆಚ್ಚು ಯುವಕರು ಒಲವು ತೋರಿಸುತ್ತಿದ್ದಾರೆ.

ಈಗ ಕರ್ನಾಟಕದಲ್ಲಿ ಸಂಪೂರ್ಣಕ್ರಾಂತಿಯತ್ತ ಯುವಕರನ್ನು ಕರೆದೊಯ್ಯುವ ಸಣ್ಣ ಪ್ರಯತ್ನ ನಡೆದಿದೆ. ಈ ಪ್ರಯತ್ನಕ್ಕೆ ಸಮಾಜ ಪರಿವರ್ತನೆಯಲ್ಲಿ ಆಸಕ್ತಿಯಿರುವ ಎಲ್ಲರ ಸಹಕಾರ ಬೇಕಿದೆ.

* * *

ಇಂಗ್ಲಿಷ್ ಕಲಿಕೆಯು ಗೊಂದಲ ಸಾಕು, ಕನ್ನಡ ಕಲಿಕೆಯ ಇಚ್ಛೆ ಬೇಕು

-ಸುರೇಂದ್ರ ಕೌಲಗಿ

ಕನ್ನಡದಲ್ಲಿಯೆ ಬಿನ್ನಹಗೈದೊಡೆ
ಹರಿ ವರಗಳ ಮಳೆ ಕರೆಯುವನು !

-ಕುವೆಂಪು

ಇಂಗ್ಲಿಷ್ ಭಾಷೆಯನ್ನು ನಮ್ಮ ಕಂದಮ್ಮಗಳಿಗೆ ಯಾವ ವಯಸ್ಸಿನಿಂದ ಕಲಿಸಬೇಕು ಎಂಬುದು ಇತ್ಯರ್ಥ್ಯವಾದರೆ ಉಳಿದ ವಿವಾದಗಳು ಸಹಜವಾಗಿಯೇ ಬಗೆಹರಿಯುವವು. ಈಗ ಪ್ರೌಢರಾಗಿರುವವರ ಮತ್ತು ಹಿರಿಯರಾಗಿರುವವರ ಸ್ವಂತ ಅನುಭವದ ಆಧಾರದ ಮೇರೆಗೆ ಹೇಳುವುದಾದರೆ ಮಕ್ಕಳಿಗೆ ಯಾವುದೇ ಭಾಷೆಯನ್ನು ಕಲಿಸಬೇಕಾದರೆ ಮಗುವಿಗೆ ಒಂಭತ್ತು ವರ್ಷ ಆಗಿರಬೇಕಾದುದು ಅವಶ್ಯ. ಭಾಷಾ ಕಲಿಕೆಗೆ ಮಗು ಅಭ್ಯಸಿಸುವ ಶಾಲಾ ತರಗತಿಗಿಂತ ಮಗುವಿನ ಬೌದ್ಧಿಕ ಬೆಳವಣಿಗೆ ಮುಖ್ಯ. ಮಗುವಿನ ಬೌದ್ಧಿಕ ಸಾಮರ್ಥ್ಯ ಬೆಳೆದರೆ ಮಗು ಯಾವುದೇ ಹೊಸ ಸಂಗತಿಯನ್ನು ಅರ್ಥ ಮಾಡಿಕೊಳ್ಳಬಲ್ಲದು. ತಕ್ಕಮಟ್ಟಿಗೆ ತನ್ನ ಸುತ್ತಲಿನ ಪರಿಸರವನ್ನು ಅರ್ಥ ಮಾಡಿಕೊಳ್ಳಬಲ್ಲದು. ಆಗ ಮಗುವಿಗೆ ತಾನು ಏನು ಕಲಿಯುತ್ತಿದ್ದೇನೆ, ತಾನು ಕಲಿಯುತ್ತಿರುವ ವಿಷಯ ಹೇಗೆ ಉಪಯೋಗವಾಗುತ್ತಿದೆ ಎಂಬುದು ತಿಳಿಯುತ್ತದೆ. ಆಗ ಅದು ಯಾವ ಭಾಷೆಯನ್ನೇ ಕಲಿಯಲಿ, ಯಾವ ಹೊಸ ವಿಷಯವನ್ನೇ ಕಲಿಯಲಿ ಆ ಭಾಷೆ ಅಥವಾ ವಿಷಯ ಮಗುವಿಗೆ ಕಷ್ಟವೆನಿಸದೆ ಅದು ಸುಲಭವೆನಿಸುತ್ತದೆ. ಕಲಿಕೆ ಸುಲಭವೆನಿಸಿದಾಗ ಮಗು ಅದನ್ನು ಉತ್ಸಾಹದಿಂದಲೂ, ಸಂತೋಷದಿಂದಲೂ ಕಲಿಯುತ್ತದೆ.

ಮಗುವಿಗೆ ಭಾಷೆಯನ್ನು ಕಲಿಸುವ ವಿಷಯಕ್ಕೆ ಬಂದಾಗ ಮಗುವನ್ನು ಒಂದು ಯಂತ್ರ ಸದೃಶವಾಗಿ ಕಾಣುವ ಮನೋಭಾವವನ್ನು ನಾವು ಬೆಳಿಸಿಕೊಂಡಿರುವಂತೆ ಅನಿಸುತ್ತದೆ. ಇತ್ತೀಚಿಗೆ ಮಕ್ಕಳ ಮೇಲೆ ಅನೇಕ ಪ್ರಕಾರದ ದೌರ್ಜನ್ಯಗಳು ಆಗುತ್ತಿರುವುದನ್ನು ನಾವು ಕಾಣುತ್ತೇವೆ. ಅಂಥದೇ ಒಂದು ದೌರ್ಜನ್ಯ ಭಾಷಾ ಕಲಿಕೆಯ ವಿಷಯದಲ್ಲಿ ಮಕ್ಕಳ ಮೇಲೆ ಆಗುತ್ತಿದೆ. ನಮಗೆಲ್ಲ ಗೊತ್ತಿರುವಂತೆ ಮನುಷ್ಯ ಹುಟ್ಟಿದಂದಿನಿಂದ ಸಾಯುವವರೆಗೂ ತನ್ನ ಸುತ್ತಲಿನ ಪರಿಸರದಿಂದ ಪ್ರಭಾವಿತನಾಗಿಯೇ ಜೀವನವನ್ನು ಸಾಗಿಸುತ್ತಾನೆ. ವಸ್ತು ಸ್ಥಿತಿ ಹೀಗಿರುವಾಗ

ಒಂದು ಕುಂಟುಬದಲ್ಲಿ ಜನಿಸಿದ ಮಗು ಪ್ರಕೃತಿ ಸಹಜವಾಗಿಯೇ ಆ ಕುಟುಂಬದ ಭಾಷೆಯನ್ನು ಕಲಿಯುತ್ತದೆ. ನಂತರ ಕ್ರಮೇಣ ತನ್ನ ಸುತ್ತಮುತ್ತಲಿನವರ ಭಾಷೆಯನ್ನು ಕಲಿಯುತ್ತದೆ. ತನ್ನ ಸುತ್ತ ಮುತ್ತಲಿನವರ ಭಾಷೆಯೆಂದರೆ ಮಗು ಒಡನಾಡಿಸಿ ಕೊಂಡಿರುವ ಪ್ರಾದೇಶಿಕ ಭಾಷೆ. ಹೀಗೆ ಮಗು ತನ್ನ ಸಾಮರ್ಥ್ಯ ಹಾಗೂ ಅವಶ್ಯಕತೆಯನುಸಾರವಾಗಿ ತನ್ನ ವಯೋಗನುಗುಣವಾಗಿ ಮತ್ತು ಬಳಕೆಯ ಅಗತ್ಯಗನುಗುಣವಾಗಿ ಭಾಷಾ ಕಲಿಕೆಯ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುತ್ತಾ ಹೋಗುತ್ತದೆ.

ಆದ್ದರಿಂದ ಈಗ ನಾವು ಮಾಡಬೇಕಾಗಿರುವುದು ಮಗು ಸಹಜವಾಗಿ ತನ್ನ ಕುಟುಂಬದ ಮತ್ತು ಪ್ರದೇಶದ ಭಾಷೆಯನ್ನು ಚೆನ್ನಾಗಿ ಕಲಿಯುವಂತೆ ವ್ಯವಸ್ಥೆಮಾಡುವುದು.

ಮಗು ತನ್ನ ಕುಟುಂಬದ ಅಥವಾ ಪ್ರದೇಶ ಭಾಷೆಯನ್ನು ಚೆನ್ನಾಗಿ ಕಲಿತ ಮೇಲೆ, ಯಾವುದೇ ಒಂದು ಭಾಷೆಯಲ್ಲಿರುವ ರಚನಾ ಕ್ರಮವನ್ನು ಸರಿಯಾಗಿ ಮತ್ತು ಸುಲಭವಾಗಿ ಕಲಿಯಬಹುದು.

ಇಂದು ಇಂಗ್ಲಿಷ್ ಶಿಕ್ಷಣದ ಪರವಾಗಿ ಮಾತನಾಡುವವರು ಈ ಕೆಳಗೆ ಕಾಣಿಸಿದ ಸಂಗತಿಗಳನ್ನು ಒತ್ತು ಕೊಟ್ಟು ಹೇಳುತ್ತಾರೆ:-

[೧] ಇಂಗ್ಲೀಷ್ ವಿಶ್ವದಾದ್ಯಂತ ಸಂಪರ್ಕ ಭಾಷೆಯಾಗಿದೆ;

[೨] ವಿಜ್ಞಾನ, ತಂತ್ರಜ್ಞಾನ ಇತ್ಯಾದಿಗಳಿಗೆ ಸಂಬಂಧಿಸಿದ ಸಾಹಿತ್ಯವೆಲ್ಲ ಇಂಗ್ಲಿಷ್ ಭಾಷೆಯಲ್ಲಿಯೇ ಇವೆ ಮತ್ತು ಆ ಭಾಷೆಯಲ್ಲಿಯೇ ಬೆಳೆಯುತ್ತಿದೆ.

ಮೇಲ್ಕಾಣಿಸಿದ ಈ ಎರಡು ಕಾರಣಗಳ ಬಗ್ಗೆ ನಾವು ಆಳವಾಗಿ ಆಲೋಚಿಸಿದರೆ ಅವು ಕೇವಲ ನಮ್ಮ ಭ್ರಾಂತಿಯೆಂದೆನಿಸುತ್ತದೆ. ಏಕೆಂದರೆ ತಾಂತ್ರಿಕ ಮತ್ತು ವೈಜ್ಞಾನಿಕ ಸಾಹಿತ್ಯವನ್ನು ಭಾರತದ ಪ್ರಮುಖ ಭಾಷೆಗಲ್ಲಿ ಸೃಷ್ಟಿಸಬಹುದಾಗಿದೆ. ಈ ನಿಟ್ಟಿನಲ್ಲಿ ಈಗಾಗಲೇ ಪ್ರಯತ್ನ ನಡೆದಿದೆ. ಇನ್ನಷ್ಟು ಶ್ರದ್ಧೆ ಮತ್ತು ಶ್ರಮದಿಂದ ಆ ಸಾಹಿತ್ಯ ನಿರ್ಮಿತಿಯ ಕೆಲಸವನ್ನು ತ್ವರಿತಗೊಳಿಸಬಹುದು. ಈಗ ಭಾರತೀಯರು ಹೊಂದಿರುವ ವೈಜ್ಞಾನಿಕ ಮತ್ತು ತಾಂತ್ರಿಕ ಜ್ಞಾನವು ಬಹಳಷ್ಟು ಸಹಕಾರಿಯಾಗುತ್ತದೆ. ವಿಜ್ಞಾನ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿಯ ಬೆಳವಣಿಗೆ ಈಗ ಕೇವಲ ಪಾಶ್ಚಿಮಾತ್ಯ ದೇಶಗಳಿಗೇ ಮೀಸಲಾಗಿಲ್ಲ. ಭಾರತವೂ ಸೇರಿದಂತೆ ವಿಶ್ವದ ಹಲವಾರು ದೇಶಗಳು ಈ ಕ್ಷೇತ್ರದಲ್ಲಿ ಹೊಸ-ಹೊಸ ಸಂಶೋಧನೆ ಮತ್ತು ಆವಿಷ್ಕಾರಗಳಲ್ಲಿ ತೊಡಗಿವೆ. ಆಗ ಅವು ತಮ್ಮದೇ ಆದ ಭಾಷೆಗಳನ್ನು ಬಹಳಷ್ಟು

ಬಳಸುತ್ತವೆ. ಅನೇಕ ಮೂಲ ತಾಂತ್ರಿಕ ಪದಗಳು ಇಂಗ್ಲೀಷ್‌ನಲ್ಲಿರದೆ ಆಯಾ ದೇಶದ ಭಾಷೆಗಳಲ್ಲಿರುತ್ತವೆ. ಬಹಳಷ್ಟು ವೈಜ್ಞಾನಿಕ ಹಾಗೂ ತಾಂತ್ರಿಕ ವಿಷಯ ಇಂಗ್ಲೀಷ್‌ಲ್ಲದೆ ರಶಿಯನ್, ಜರ್ಮನ್, ಫ್ರೆಂಚ್, ಸ್ವಿಸ್, ಜಪನೀಸ್ ಮುಂತಾದ ಭಾಷೆಗಳಲ್ಲೂ ಇದೆ. ಇಂಗ್ಲೀಷ್ ಒಂದೇ ವೈಜ್ಞಾನಿಕ-ತಾಂತ್ರಿಕ ವಿಷಯದ ಗುತ್ತಿಗೆ ತೆಗೆದುಕೊಂಡಿದೆಯೆಂದು ಭಾವಿಸುವುದಾದರೆ ಅದು ಮೌಢ್ಯತನವಾಗುತ್ತದೆ. ಅಲ್ಲದೆ, ಕಳೆದ ಎರಡು ಮೂರು ದಶಮಾನಗಳಲ್ಲಿ ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಆದ ಪ್ರಗತಿಯಿಂದ ಪ್ರಭಾವಿತವಾಗಿರುವ ವಿಶ್ವದ ಹೊಸ ತಲೆಮಾರಿನ ಯುವಕರು ಮತ್ತು ವಿದ್ಯಾರ್ಥಿಗಳು ಹೊಸ ಆವಿಷ್ಕಾರಗಳನ್ನು, ಸಂಶೋಧನೆಗಳನ್ನು ತಮ್ಮ ತಮ್ಮ ನೆಲೆಯಲ್ಲಿದ್ದುಕೊಂಡೇ ಮಾಡುತ್ತಿದ್ದಾರೆ ಮತ್ತು ತಮ್ಮ ಆ ಸಂಶೋಧನೆಗಳಿಗೆ ಬೇಕಾದ ಹೊಸ-ಹೊಸ ಶಬ್ದಗಳನ್ನು ಪ್ರಾದೇಶಿಕ ಭಾಷೆಯಲ್ಲಿ ಟಂಕಿಸುತ್ತಿದ್ದಾರೆ.

ಭಾರತದಲ್ಲಿರುವ ಅರೇಬಿಕ್ ಮತ್ತು ಸಂಸ್ಕೃತ ಭಾಷೆಗಳು ವೈಜ್ಞಾನಿಕ ಕ್ಷೇತ್ರಕ್ಕೆ ಶಬ್ದಗಳ ರಚನೆಗಾಗಿ ಅಗತ್ಯವಾಗಿರುವ ಭಾಷಾ ಸಂಪತ್ತನ್ನು ಒದಗಿಸಬಲ್ಲವು. ಆದ್ದರಿಂದ ಇಂದು ಅಗತ್ಯವಾಗಿರುವುದು ಇಂಗ್ಲಿಷ್ ಭಾಷೆಯ ಕಲಿಕೆಗಿಂತ ಪ್ರಾದೇಶಿಕ ಹಾಗೂ ಸಂಸ್ಕೃತದಂಥ ಭಾಷೆಗಳ ಕಲಿಕೆ ಮುಖ್ಯವಾಗುತ್ತದೆ. ಈಗ ಇಂಗ್ಲಿಷ್ ಭಾಷೆಯಲ್ಲಿರುವ ವೈಜ್ಞಾನಿಕ-ತಾಂತ್ರಿಕ ವಿಷಯದ ಸಾಹಿತ್ಯವನ್ನು ಎಲ್ಲ ಪ್ರಾದೇಶಿಕ ಭಾಷೆಗಳಿಗೆ ತ್ವರಿತವಾಗಿ ರೂಪಾಂತರಗೊಳಿಸುವ ಕೆಲಸವನ್ನು ಮಾಡಬಲ್ಲ ಸಮರ್ಥರು ಭಾರತದ ಎಲ್ಲ ಪ್ರಮುಖ ಭಾಷಾ ಕ್ಷೇತ್ರಗಳಲ್ಲಿ ಇದ್ದಾರೆ. ಈಗ ಗೊತ್ತಿರುವ ತಂತ್ರಜ್ಞಾನವನ್ನು ಈ ಕೆಲಸಕ್ಕೆ ಉಪಯೋಗಿಸಿಕೊಳ್ಳಬಹುದಾಗಿದೆ.

ತಂತ್ರಜ್ಞಾನ ಮತ್ತು ವಿಜ್ಞಾನದ ಬಹಳಷ್ಟು ಸಾಹಿತ್ಯ ಇಂಗ್ಲೀಷ್‌ನಲ್ಲಿಯೇ ಇದೆ. ಆದ್ದರಿಂದ ನಮ್ಮ ಮಕ್ಕಳು ಇಂಗ್ಲೀಷನ್ನು ಮೊದಲನೇ ತರಗತಿಯಿಂದಲೇ ಕಲಿತು ಆ ಭಾಷೆಯಲ್ಲಿ ಪ್ರೌಢಿಮೆ ಸಾಧಿಸಬೇಕೆಂದು ಬಯಸಿದಲ್ಲಿ ಆಗುವ ಪರಿಣಾಮ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಮೇಲೆಯೇ ಎಂಬುದನ್ನು ಮರೆಯುತ್ತಾರೆ. ಏಕೆಂದರೆ ಸಂಶೋಧನಾ ಮನೋಭಾವಕ್ಕೂ, ಭಾಷೆಗೂ ಅವಿನಾಭಾವ ಸಂಬಂಧವಿದೆ. ಓರ್ವ ವಿಜ್ಞಾನಿ ತಾನು ಕಂಡು ಹಿಡಿಯುವ ಜ್ಞಾನಕ್ಕೆ ತಕ್ಷಣವೇ ಸೂಕ್ತವಾದ ಶಬ್ದಗಳನ್ನೂ, ಸಾಹಿತ್ಯವನ್ನೂ ರಚಿಸಬೇಕಾಗುತ್ತದೆ. ಈ ಪ್ರಕ್ರಿಯೆ ವಿಜ್ಞಾನಿಯ ಸಂಶೋಧನಾ ಪ್ರಕ್ರಿಯೆಯೊಂದಿಗೇ ಸಮರಸಗೊಂಡೇ ನಡೆಯುತ್ತಿರುತ್ತದೆ. ವಿಜ್ಞಾನಿಗೆ ತನ್ನ ಸಂಶೋಧನೆಯ ಅರ್ಥವನ್ನು ಬಿಂಬಿಸುವಂಥ ಶಬ್ದ ದೊರೆಯದೇ ಹೋದರೆ ಅವನ ಸಂಶೋಧನಾ ಪ್ರಯತ್ನ ಕುಂಠಿತಗೊಳ್ಳಬಹುದು. ಅಂಥ ಸಮಯದಲ್ಲಿ ಆ ವಿಜ್ಞಾನಿಯ ನೆರವಿಗೆ ಬರಬಲ್ಲ ಭಾಷೆ ಅವನ ಮಾತೃಭಾಷೆ

ಅಥವಾ ಪ್ರದೇಶಭಾಷೆ. ನಮ್ಮ ಹೊಸ ಪೀಳಿಗೆಗೆ ಪ್ರದೇಶಭಾಷೆಯನ್ನು ಮತ್ತು ಆ ಭಾಷೆಯ ಮೂಲಕ ವಿಜ್ಞಾನ ಮತ್ತು ಮಾನವಿಕ ವಿಷಯಗಳನ್ನು ಅಚ್ಚುಕಟ್ಟಾಗಿ ಕಲಿಸದೆ ಹೋದರೆ ನಮ್ಮ ನಾಡಿನ ಮಕ್ಕಳಲ್ಲಿರುವ ವೈಜ್ಞಾನಿಕ ಮತ್ತು ಇತರ ಮಾನವೀಯ ಪ್ರತಿಭೆಗಳು ಮಹತ್ತರವಾದುದನ್ನು ಸಾಧಿಸಲು ತಡೆಗೋಡೆಯನ್ನು ಕಟ್ಟಿದಂತಾಗುವುದು, ಅಷ್ಟರಮಟ್ಟಿಗೆ ನಮ್ಮ ನಾಡಿನ ಮಕ್ಕಳು ಎಲ್ಲ ಅರ್ಥದಲ್ಲೂ ಕುಬ್ಜರಾಗುತ್ತಾರೆ.

ಈಗ ಕೃಷಿ, ಪಶುವಿಜ್ಞಾನ, ತಂತ್ರಾಂಶ, ಗಣಕಯಂತ್ರ ವೈದ್ಯಕೀಯ ಕ್ಷೇತ್ರಗಳಲ್ಲಿ ಸಾಕಷ್ಟು ವೈಜ್ಞಾನಿಕ ಭಾಷಾ ಸಂಪತ್ತು ಬೆಳೆದಿದೆ. ಪ್ರತಿತಂತ್ರಜ್ಞಾನ ಕ್ಷೇತ್ರದಲ್ಲೂ ಅದು ನಿರ್ಮಾಣವಾಗುತ್ತಿದೆ. ಈಗಾಗಲೇ ಪ್ರಾದೇಶಿಕ ಭಾಷೆಗಳಲ್ಲಿ ಬೆಳೆದಿರುವ ವೈಜ್ಞಾನಿಕ ಸಾಹಿತ್ಯದ ಒಂದು ಸಮೀಕ್ಷೆ ನಡೆಸಿದರೆ ಅದರ ಅಗಾಧತೆಯನ್ನು ನೋಡಿ ನಮಗೆ ಆಶ್ಚರ್ಯವೂ, ಸೋಜಿಗವೂ ಅನಿಸುವುದರಲ್ಲಿ ಸಂದೇಹವಿಲ್ಲ.

ಸಂಪರ್ಕಭಾಷೆಯಾಗಿ ಇಂಗ್ಲಿಷನ್ನು ಮೂರು ನಾಲ್ಕು ಸ್ತರಗಳಲ್ಲಿ ನೋಡಬೇಕಾಗುತ್ತದೆ. ಈ ವಿಷಯದಲ್ಲಿ ಕಣ್ತೆರೆದು ವಾಸ್ತವಿಕ ಜಗತ್ತಿಗೆ ಬರಬೇಕಾಗುತ್ತದೆ. ಭಾರತದ ನೂರುಮೂರು ಕೋಟಿ ಜನರಲ್ಲಿ ಐವತ್ತು ಕೋಟಿಗೂ ಮೀರಿದ ಭಾರತೀಯರು ತಮ್ಮ ಜೀವಮಾನದ ಬಹುಭಾಗವನ್ನೆಲ್ಲ ತಮ್ಮ ಜಿಲ್ಲೆಯ ಒಳಗೇ ಕಳೆಯುತ್ತಾರೆ; ಇನ್ನು ಕೇವಲ ಒಂದು ಅಥವಾ ಎರಡು ಕೋಟಿ ಜನರು ತಮ್ಮ ರಾಜ್ಯಗಳ ಹೊರಗೆ ಹೋಗುತ್ತಾರೆನೋ; ಇನ್ನು ಕೇವಲ ಲಕ್ಷ ಸಂಖ್ಯೆಯಲ್ಲಿ ಮಾತ್ರ ಹೊರದೇಶಗಳಿಗೆ ಹೋಗುತ್ತಾರೆ. ಇನ್ನು ಕೇವಲ ಸಾವಿರ ಸಂಖ್ಯೆಯಲ್ಲಿ ಮಾತ್ರ ಇಂಗ್ಲೆಂಡ್ ಮತ್ತು ಅಮೇರಿಕಾಕ್ಕೆ ಹೋಗುತ್ತಾರೆ. ಇದು ನೈಜ ಪರಿಸ್ಥಿತಿ. ಅಂದ ಮೇಲೆ ಇಲ್ಲಿ ಸಂಪರ್ಕಭಾಷೆಯಾಗಿ ಇಂಗ್ಲೀಷ್‌ನ ಪಾತ್ರ ಬಹಳ ಗೌಣವಾಗುತ್ತದೆ. ಬದಲಿಗೆ, ಪ್ರಾದೇಶಿಕ ಭಾಷೆಗಳ ಸ್ಥಾನ ಹಿರಿದಾಗುತ್ತದೆ. ಈ ವಾಸ್ತವಿಕತೆಯಲ್ಲಿ ಇಂಗ್ಲಿಷ್ ಭಾಷೆಗಿಂತ ಪ್ರಾದೇಶಿಕ ಭಾಷೆಗಳ ಕಲಿಕೆ, ಬಳಕೆ, ಬೆಳಸುವಿಕೆ ಪ್ರಧಾನವಾಗುತ್ತದೆ.

ಇಂದಿನ ಭಾರತದ ಸಮಾಜ ರಚನೆಯಲ್ಲಿ ಬಹಳಷ್ಟು ವೈಷಮ್ಯಗಳಿವೆ: ಧಾರ್ಮಿಕ, ಆರ್ಥಿಕ ಇತ್ಯಾದಿ. ಅಲ್ಲದೆ, ಶ್ರೇಣೀಕೃತ ಸಮಾಜವಿದೆ. ಈಗ ಇಂಗ್ಲೀಷ್ ಭಾಷೆಯು ಅಳವಡಿಕೆಯಿಂದಾಗಿ ಸಮಾಜವನ್ನು ಇನ್ನಷ್ಟು ವೈಷಮ್ಯಕ್ಕೆ ಒಳಪಡಿಸಿದಂತಾಗುತ್ತದೆ. ಇಂಗ್ಲಿಷ್ ಬಲ್ಲವರೆಲ್ಲ ಮೇಲ್ವರ್ಗದವರಾದರೆ, ಇಂಗ್ಲೀಷ್ ಗೊತ್ತಿಲ್ಲದವರೆಲ್ಲ ದಲಿತರಾಗಿಬಿಡುತ್ತಾರೆ. ಈ ವೈಷಮ್ಯವನ್ನು ಹೋಗಲಾಡಿಸುವ

ಕ್ರಮ ಸಾರ್ವತ್ರಿಕವಾಗಿ ಇಂಗ್ಲಿಷ್ ಕಲಿಸುವುದಲ್ಲ, ಬದಲಿಗೆ, ಬಹು ಕೋಟಿ ಭಾರತೀಯರ ಭಾಷೆಗಳಾದ ಪ್ರಾದೇಶಿಕ ಭಾಷೆಗಳನ್ನು ಸಮರ್ಥವನ್ನಾಗಿಯೂ, ಬಲಿಷ್ಠವನ್ನಾಗಿಯೂ ಉಪಯುಕ್ತವನ್ನಾಗಿಯೂ ಮಾಡಿದರೆ ಭಾರತೀಯರೆಲ್ಲರೂ ಸಮಾನವಾಗಿಯೇ ಉಳಿಯುವರಲ್ಲದೆ ಸಂವಿಧಾನಾತ್ಮಕವಾಗಿಯೂ ಎಲ್ಲ ಭಾಷೆಗಳಿಗೂ ಯಾವುದೇ ತಾರತಮ್ಯವಿಲ್ಲದೆ ಸಮಾನ ಗೌರವ ದೊರೆತಂತಾಗುವುದು.

ಈಗ ಇಂಗ್ಲಿಷ್ ಭಾಷಾ ಕಲಿಕೆಯನ್ನು ನಾವು ಒತ್ತಾಯಿಸುವುದೆಂದರೆ ಡಿ.ವಿ.ಜಿ.ಯವರ ಮಾತಿನಲ್ಲಿ ಹೇಳುವುದಾದರೆ ಕೊಬ್ಬರಿಗೆ ಕೊಡಬೇಕಾದ ಮಹತ್ವವನ್ನು ಕರಟಕ್ಕೆ ಕೊಟ್ಟಂತೆ; ವಿನೊಬಾರವರ ಮಾತಿನಲ್ಲಿ ಹೇಳುವುದಾದರೆ ಬೇರಿಗೆ ಕೊಡಬೇಕಾದ ಮಹತ್ವವನ್ನು ಟೊಂಗೆಗೆ ಕೊಟ್ಟಂತೆ. ಭಾರತೀಯ ವಿಜ್ಞಾನಿ ಸಿ.ವಿ.ರಾಮನ್‌ರ ಈ ಮಾತು ಸಹ ಮನನಿಯವಾಗಿದೆ, "ಸರಿಯಾದ ಶಿಕ್ಷಣದ ತಿರುಳು ಇರುವುದು ವಿದ್ಯಾರ್ಥಿಯ ವೈಯಕ್ತಿಕತೆ ಮತ್ತು ವ್ಯಕ್ತಿತ್ವವನ್ನು ರೂಪಿಸಿ ಬೆಳೆಸುವುದರಲ್ಲಿ."

ಶ್ರೇಷ್ಠ ದಾರ್ಶನಿಕ ಹಾಗೂ ಗಣಿತ ಶಾಸ್ತ್ರಜ್ಞರಾದ ಬರ್ಟ್ರ್ಯಾಂಡ್ ರಸೆಲ್ ರವರು ಶಿಕ್ಷಣದ ಬಗ್ಗೆ ಹೇಳಿರುವ ಈ ಮಾತನ್ನು ಗಮನಿಸುವುದು ಸಹ ಉಚಿತವೆನಿಸುತ್ತದೆ. "ಮಕ್ಕಳು ಚಿಕ್ಕವಯಸ್ಸಿನಿಂದಲೇ ತೃಪ್ತಿಕರ ವಾತಾವರಣದಲ್ಲಿ ಬೆಳೆಯಬೇಕಲ್ಲವೆ?" ವಿಶ್ವಕವಿ ರವೀಂದ್ರನಾಥ ಟಾಗೋರ ವಿದ್ಯಾಭ್ಯಾಸ ಪ್ರಾರಂಭವಾದದ್ದು ಅವರ ಮನೆಯ ಜಗುಲಿಯ ಮೇಲೆ, ಮಾತೃಭಾಷೆಯಲ್ಲಿ ಮತ್ತು ಮುಕ್ತವಾತಾವರಣದಲ್ಲಿ.

ಕನ್ನಡ ನಾಡಿನ ಮಕ್ಕಳು ಸಹ ಐನ್‌ಸ್ಟೆನ್‌ರಂತೆ, ಬಟ್ರಾಂಡ್ ರಸೆಲ್‌ರಂತೆ, ಸಿ.ವಿ.ರಾಮನ್‌ರಂತೆ ವಿಜ್ಞಾನಿಗಳಾಗಿಯೂ, ರವೀಂದ್ರನಾಥ ಟಾಗೋರ್, ಕುವೆಂಪುರವರಂತೆ ಶ್ರೇಷ್ಠ ಕವಿಗಳಾಗಿ ರೂಪಿತರಾಗಲು ಇಂಗ್ಲೀಷ್ ಕಲಿಕೆಯ ಗೊಂದಲವನ್ನು ನಿಲ್ಲಿಸಿ. ಕನ್ನಡ ಅಥವಾ ಪ್ರಾದೇಶಿಕ ಭಾಷೆಯ ಕಲಿಕೆಗೆ ಜನ ತಮ್ಮ ಇಚ್ಛಾಶಕ್ತಿಯನ್ನು ತೋರುವಂತಾಗಲಿ.

* * *

ನನ್ನ ಬರಹಕ್ಕೆ ಇದ್ದ ಸಾಹಿತ್ಯಕ ವಾತಾವರಣ

– ದಿ॥ ಡಾ॥ ಬಿ.ಸಿ.ರಾಮಚಂದ್ರ ಶರ್ಮಾ

ಸುಮಾರು ಇಪ್ಪತ್ತು ವರ್ಷಗಳವರೆಗೆ ಪರದೇಶಗಳಲ್ಲಿದ್ದ ನನಗೆ ತಿಂಗಳಿಗೊಮ್ಮೆಯಾದರೂ ಬೀಳುತ್ತಿದ್ದ ಕನಸು ನನಸಾದದ್ದು ೧೯೮೭ರ ಕೊನೆಗೆ. ನಾನು ಸ್ವದೇಶಕ್ಕೆ ಹಿಂದಿರುಗುವ ನಿರ್ಧಾರ ಮಾಡಿದೆ. ಅಷ್ಟರಲ್ಲಾಗಲೇ ನಮ್ಮ ಮೂರು ಮಕ್ಕಳೂ ಸ್ವ ಇಚ್ಛೆಯಿಂದ ಇಂಡಿಯಾಕ್ಕೆ ಬಂದು ನೆಲೆಸಿಬಿಟ್ಟಿದ್ದು ಎಷ್ಟರ ಮಟ್ಟಿಗೆ ನಮ್ಮ ನಿರ್ಧಾರವನ್ನು ರೂಪಿಸಿತೋ ಅನ್ನುವುದನ್ನು ಹೇಳುವುದು ಕಷ್ಟ. ಆ ನಿರ್ಧಾರಕ್ಕೆ ಮೊದಲು ನನ್ನ ಹೆಂಡತಿ ಹಾಗೂ ನಾನು ಕೂತು ನಮ್ಮ ಬ್ಯಾಂಕ್ ಲೆಕ್ಕಗಳಲ್ಲಿದ್ದ ಹಣದ ಜೊತೆಗೆ ಯುನೆಸ್ಕೋದಿಂದ ರಿಪ್ಯಾಟ್ರಿಯೇಷನ್ ರೂಪದಲ್ಲಿ ಎಷ್ಟು ಬರಬಹುದೆಂದು ಲೆಕ್ಕ ಹಾಕಿ, ಕೂಡಿ, ಶೇಕಡಾ ಹತ್ತರಂತೆ ಬಡ್ಡಿ ಕೊಟ್ಟು, ಆ ಬಡ್ಡಿಯ ಮೇಲೆ ಮಾನವಾಗಿ ಬದುಕುವುದು ಸಾಧ್ಯವೇ ಎಂದು ಯೋಚಿಸುತ್ತ ರಾತ್ರಿಗಳನ್ನು ಕಳೆದದ್ದು ನೆನಪಾಗುತ್ತಿದೆ. ವಾಪಸ್ಸು ಬಂದು ನೆಲೆಸುವ ಅತೀವ ಆಸೆಯ ಜೊತೆ ಜೊತೆಗೇ ಎಂಥದೋ ಆತಂಕ. "ಹುಟ್ಟಿಲ್ಲೋ ಅಲ್ಲೇ ಸಾಯುವುದೆ ಸ್ವರ್ಗ" ಅನ್ನುವ ಸಾಲನ್ನು ನಾನೇ ಒಂದು ಕವನದಲ್ಲಿ ಬರೆದಿದ್ದರೂ, ಎಂಥದೋ ಅಳುಕು.....

ಕನ್ನಡ ಸಾಹಿತ್ಯ ಎಷ್ಟರಮಟ್ಟಿಗೆ ನನ್ನ ತೋಳು ಹಿಡಿದೆಳೆಯಿತು? ಪರದೇಶಗಳಲ್ಲಿದ್ದಾಗ ಬರೆಯುವುದು ಕಷ್ಟವಾಗಿತ್ತು. ಅದರಲ್ಲೂ ಇಂಗ್ಲೆಂಡಿನಲ್ಲಿದ್ದ ಹನ್ನೆರಡು ವರ್ಷ. ವ್ಯವಹಾರಕ್ಕೆ ಇಂಗ್ಲಿಷ್ ಅನಿವಾರ್ಯವಾಗಿ, ಹಗಲಿಡೀ ಅದರಲ್ಲಿ ಮುಳುಗಿರುತ್ತಿದ್ದೆ. ಹೆಂಡತಿಯ ಕನ್ನಡ ಮಾತಲ್ಲದೇ ಬೇರೆಯವರಿಂದ ನಾಲ್ಕು ಕನ್ನಡದ ಮಾತು ಕೇಳಬೇಕಾಗಿದ್ದರೆ ನಲವತ್ತು ಮೈಲಿ ಪ್ರಯಾಣ ಮಾಡಬೇಕಾಗಿತ್ತು. ಇಂಗ್ಲಿಷ್ ಬರದ ನನ್ನ ತಾಯಿ ನಮ್ಮ ಜೊತೆಗೆ ೬೪ರಿಂದ ೬೯ರವರೆಗೆ ಇದ್ದುದ್ದು ನನ್ನ ಪಾಲಿಗೆ ವರವಾಯಿತು. ಸುಮಾರು ಕತೆಗಳನ್ನೂ ಕವನಗಳನ್ನೂ ಬರೆದೆ. ೬೯ರಲ್ಲಿ ಇಂಡಿಯಾಕ್ಕೆ ನನ್ನ ಪಿ.ಎಚ್.ಡಿ.ಗೆ ಸಂಬಂಧಿಸಿದ ಹಾಗೆ ಬಂದಾಗ "ಹೇಸರಗತ್ತೆ" ಕವನ ಸಂಕಲನ ಹೊರಬರುವುದು ಸಾಧ್ಯವಾಯಿತು.

ಆ ಪರದೇಶದ ವರ್ಷಗಳಲ್ಲಿ ನಾವು ಸುಮಾರು ಹತ್ತು ಬಾರಿಯಾದರೂ ಬೆಂಗಳೂರಿಗೆ ಬಂದು ತಿಂಗಳವರೆಗೆ ಇದ್ದು ಹೋಗುತ್ತಿದ್ದೆವು. ಹಾಗೆ ಬಂದಾಗ ನನ್ನ ಬಹುಪಾಲು ಕಾಲವನ್ನು ಸಾಹಿತಿಗಳ ಸಹವಾಸದಲ್ಲಿ ಕಳೆಯುತ್ತಿದ್ದೆ. ಕಿವಿ ತುಂಬ ಕನ್ನಡವನ್ನಲ್ಲದೇ ನಮ್ಮ ಸಾಹಿತ್ಯ ಕ್ಷೇತ್ರದ ಜಗಳಗಳನ್ನೂ ತುಂಬಿಕೊಂಡು ಆಮೇಲೆ, ನನ್ನ ಪರದೇಶದ ಏಕಾಂತಕ್ಕೆ, ಒಳಗಿನ ಒತ್ತಾಯ ಅದಮ್ಯವಾದಾಗ ಬರಹಕ್ಕೆ, ಹಿಂದಿರುತ್ತಿದ್ದೆ.

ಅದಕ್ಕೆ ಮೊದಲು ಎರಡು ಸಲ ಬಂದಿದ್ದರೂ, ೬೯ರಲ್ಲಿ ಆರು ತಿಂಗಳ ವಾಸ್ತವ್ಯಕ್ಕೆ ಬಂದಾಗ ಕಂಡ ಬದಲಾವಣೆಗಳು ನನ್ನನ್ನು ಬುಡಮಟ್ಟ ಹಿಡಿದು

ಅಲ್ಲಾಡಿಸಿದವು ಅನ್ನಬಹುದೇನೋ. ನನ್ನ ಕಣ್ಣ ಮುಂದೇ ಬೆಳೆದ ಅನಂತಮೂರ್ತಿ "ಸಂಸ್ಕಾರ"ವೇ ಕಾರಣವಾಗಿ ತುಂಬ ಬೆಳೆದಿದ್ದರು. ಕನ್ನಡ ನಾಟಕದ(Angry young Man) ಆಗಿದ್ದ ಲಂಕೇಶ. ಕಣ್ಣಾಚೆಗೆ ಹೋದವನು ಮನಸ್ಸಿನಿಂದಲೂ ದೂರವೆನ್ನುವಂತೆ ನಾನು ಅವರ ಕೀರ್ತಿಯ ಬಗ್ಗೆ ಹೊಟ್ಟೆಯುರಿ. ನನ್ನ ಕ್ರುತಶಕ್ತಿಯ ಬಗ್ಗೆ ಸಂದೇಹ ಕಾಡಿದ್ದು ಆಗ. ನಾನು ಬರೆದಿದ್ದರಲ್ಲೂ ವಸ್ತುವಾಗಿದ್ದದ್ದು ನನ್ನ ಪರದೇಶದ ಅನುಭವಗಳು, ಅವರಿಬ್ಬರ ಬಾಲ್ಯದ ಸಮೃದ್ಧ ಗ್ರಾಮೀಣ ಅನುಭವಗಳ ಎದುರಿಗೆ ಯಾವುದೋ ಅಸಂಗತವಾದ ವಿಷಯಗಳ ಬಗ್ಗೆ ಬರೆಯುತ್ತಿದ್ದೇನೋ ಅನ್ನುವ ಅಳುಕು. ನನ್ನ "ಅಯೊಧ್ಯೆ" ಕವನವನ್ನು ಬರೆಯಲೇಬೇಕಾಗಿ ಬರದದ್ದು ಆಗ: ಅನಂತಮೂರ್ತಿಯ ಸರಸ್ವತಿಪುರಂ ಮನೆಯಲ್ಲಿ. ಈ ಸಾಲು ಕೆಲವರಿಗಾದರೂ ನೆನಪಾಗಬಹುದು: "ರಾಮ ಭೂಗತ, ಗೆದ್ದವನು ಲಂಕೇಶ," ಆ ಚರಣದ ಮೂರನೇ ನಾಲ್ಕನೇ ಸಾಲುಗಳಲ್ಲಿ ಬಂದ ಘೋಷ, ಆವೇಷಗಳಷ್ಟೇ ಲಂಕೇಶ ಬರುವುದಕ್ಕೆ ಕಾರಣವಾಗಿರಲಿಲ್ಲ ಅನ್ನುವುದನ್ನು ಬಿಡಿಸಿ ಹೇಳಬೇಕೇ?

ಆ ಕವನ ನನಗಂತೂ ಪ್ರಿಯವಾದದ್ದು. ಅಷ್ಟೇ ಪ್ರಿಯವಾದದ್ದು ಅದೇ ಕಾಲಕ್ಕೆ ಬರೆದ "ಜೆಸ್ಟರ್ಸ್" ಅನ್ನುವ ಪದ್ಯ. ಅದರಲ್ಲಿ ಬರುವ ಒಂದು ಸಾಲು: "ಹಾಲಿಗೂ ಮುಂಚೆ ಹೊಡೆದೆಬ್ಬಿಸಿದ ಸಂಸ್ಕಾರ". ಬೆಳಿಗ್ಗೆ ಏಳು ಗಂಟೆಗೆ ಮೈಲಿಗಳಾಚೆಯಿದ್ದ ಯವುದೋ ಚಿತ್ರಮಂದಿರದಲ್ಲಿ "ಸಂಸ್ಕಾರ" ಸಿನಿಮಾದ ಕರಡು ಪ್ರತಿ ನೋಡಿ ಬಂದಾದ ಮೇಲೆ ಕೇಲವೇ ದಿನಗಳಲ್ಲಿ ಬರೆದ ಅವನ.... ಇಂಗ್ಲೆಂಡಿನ ಚಳಿಯಲ್ಲಿ, ಏಕಾಂತದಲ್ಲಿ, ಅನಂತಮೂರ್ತಿ ಲಂಕೇಶ ಕಣ್ಣೆದುರಿಗೇ ನಿಂತ ಪೆಡಂಭೂತಗಳಾಗಿ ಕಾಡುವುದು ಸಾಧ್ಯವಿರಲಿಲ್ಲ.

ಆ ಸಲದ ಭೇಟಿ ನನ್ನಲ್ಲಿ ಮರೆಯಾಗದ ಒಂದು ಅನುಭವವಾಗಿ ಉಳಿದಿರುವುದಕ್ಕೆ ಹಲವಾರು ಕಾರಣಗಳಿವೆ. ನನ್ನ ಜೊತೆಗೆ ಇಂಡಿಯಾಕ್ಕೆ ಬಂದ ನನ್ನ ತಾಯಿ ಮತ್ತೆ ಇಂಗ್ಲೆಂಡಿಗೆ ಬರುವುದಿಲ್ಲವೆಂದಿದ್ದು; ನನ್ನ ಓರೆಗೆಯವರ ಮುಖದಲ್ಲಿದ್ದ ಮುಪ್ಪಿನ ಛಾಯೆ ಕಂಡು ನನಗೆ ನಲವತ್ತು ದಾಟಿದ ಅನುಭವ ಮೊದಲ ಬಾರಿಗೆ ಬಂದದ್ದು; ಲಂಕೇಶನ ಜೊತೆಗೆ ಧಾರವಾಡಕ್ಕೆ ಹೋಗಿ ಗೆಳೆಯ ಶಾಂತಿನಾಥ ದೇಸಾಯಿ ಅವರ ಮನೆಯಲ್ಲಿ, ಚಂಪಾ, ಗಿರೀಶ್‌ಕಾರ್ನಾಡ್ ಹಾಗೂ ಕೆ.ರಾಘವೇಂದ್ರರಾವ್ ಅವರ ಜೊತೆಯಲ್ಲಿ ಕೂತು ಮಾತಾಡುತ್ತಿದ್ದಾಗ ಬ್ರಾಹ್ಮಣ-ಶೂದ್ರರ ಮಾತು ಬಂದು ಬೆಳಗಿನ ಝಾವದ ಗಾಳಿ ಬಿಸಿಯೇರಿದ್ದು. ಸಾಹಿತ್ಯಕ್ಕೆ ಸಂಬಂದಪಟ್ಟ ಹಾಗೆ ಅಂತಹ ಮಾತು ಬಂದದ್ದು ಅದೇ ಮೊದಲಲ್ಲದಿದ್ದರೂ ನನಗೆ ಆ ರಾತ್ರಿಯ ಬಿರುಸು ತುಂಬ ಘಾಸಿ ಮಾಡಿದ್ದು ಇವೊತ್ತಿಗೂ ನೆನಪಿದೆ. ಧಾರವಾಡದಿಂದ ಹೆಗ್ಗೋಡಿಗೆ, ಸುಬ್ಬಣ್ಣ ಅವರ ಮನೆಯ ಆತಿಥ್ಯ, ಧಾರವಾಡದಲ್ಲಿ ನಡೆದದ್ದನ್ನು ಮರೆಯುವ ಪ್ರಯತ್ನ, ಸಾಗರದ ಬೀದಿಗಳಲ್ಲಿ ಗಿರೀಶ್ "ಹೀರೋ"ತರಹ ನಡೆಯುವಾಗ ಘೇರಾಯಿಸಿದ ಜನ ಇತ್ಯಾದಿ, ಇತ್ಯಾದಿ.....

ಊರಲ್ಲಿ ಬಂದಾಗ ಘನೀಭೂತವಾಗತೊಡಗಿದ್ದ ಬ್ರಾಹ್ಮಣ-ಶೂದ್ರರ ಸಮಸ್ಯೆ

೭೪-೭೫ರಲ್ಲಿ ಬಂದಾಗ ನಡೆದ ಒಕ್ಕೂಟದ ಸಮ್ಮೇಳನ.....

ಹುಟ್ಟಿನಿಂದ ಬ್ರಾಹ್ಮಣನಾದರೂ ನಂಬಿಕೆಯಿಂದ ಯಾವ ಒಂದು ಜಾತಿಗೂ ಸೇರದ ನನಗೆ ಮೊದಲ ಬಾರಿಗೆ ಲಂಕೇಶನ ಜಾತಿ ಯಾವುದೆಂದು ತಿಳಿದಿದ್ದು. ಮಾತು ಮಾತಿಗೆ ಜಾಣ ಬ್ರಾಹ್ಮಣನೆಂದು ಕರೆಸಿಕೊಂಡಿದ್ದರ ಜೊತೆಗೆ ನಾನು ಇಂಡಿಯಾ ಬಿಟ್ಟು ಇಥೀಯೋಪಿಯಾಕ್ಕೆ ಹೋಗಬೇಕಾದದ್ದು ನನ್ನ ಬ್ರಾಹ್ಮಣ್ಯವೇ ಅಲ್ಲವೇ ಅನ್ನುವ ನೆನಪು ಮತ್ತೆ ಮತ್ತೆ ಬಂದು ಗೊಂದಲವನ್ನುಂಟುಮಾಡಿದ್ದು.....

ಇಷ್ಟೆಲ್ಲ ನೆನಪುಗಳನ್ನು ಹೊತ್ತು ಇಂಡಿಯಾಕ್ಕೆ ಬರುವ ನಿರ್ಧಾರ ಮಾಡಿದೆ. ಸಾಹಿತ್ಯ ಕ್ಷೇತ್ರದಲ್ಲಿ ಮತ್ತೆ ನನ್ನನ್ನು ಸ್ಥಾಪಿಸಿಕೊಳ್ಳುವ ನಿರ್ಧಾರಮಾಡಿ ಇಂಡಿಯಾದ ನೆಲಕ್ಕೆ ಮರಳಿದೆ.

ನಾನು ದೇಶಕ್ಕೆ ಹಿಂದಿರುಗುವ ಮೂರೇ ದಿನಗಳ ಹಿಂದೆ ನನ್ನ ತಾಯಿ ಹಾರ್ಟ್ ಅಟ್ಯಾಕ್ ಆಗಿ ಆಸ್ಪತ್ರೆಗೆ ಹೋಗಿದ್ದರು. ತಿಂಗಳವರೆಗೆ ಅಲ್ಲಿದ್ದು, ಆರೋಗ್ಯ ಸುಧಾರಿಸಿ ಮನೆಗೆ ಬಂದ ಮೇಲೆ ನನಗೆ ಮತ್ತೆ ಸಾಹಿತ್ಯದ ಕಡೆಗೆ ಗಮನ ಕೊಡುವ ಅವಕಾಶ. ಮೊದಲ ಅನುಭವ ಶಿರ್ಶಿಯ ಸಮ್ಮೇಳನ. ಸಮ್ಮೇಳನದ ಅಂಗವಾಗಿ ನಡೆದ ವಿಚಾರ ಸಂಕಿರಣಗಳಿಗಿಂತಲೂ ವೈಯಕ್ತಿಕವಾಗಿ ನನಗೆ ಹೆಚ್ಚು ಲಾಭದಾಯಕವಾದುದ್ದು ಕನ್ನಡದ ಸುಪ್ರಸಿದ್ಧ ಕಾದಂಬರಿಗಾರ ಶಾಂತಿನಾಥರೊಡನೆ ಕಳೆದ ದಿನಗಳು, ನಡೆಸಿದ ಚರ್ಚೆ.

ಬಂಡಾಯ ಸಾಹಿತ್ಯದ ಧ್ವಜ ಗಾಳಿಯಲ್ಲಿ ಕಣ್ಣು ಕೋರೈಸುವ ಹಾಗೆ ಹಾರುತ್ತಿದ್ದ ದಿನಗಳು ಅವು. ನವ್ಯ ಸಾಹಿತ್ಯದ ಕೊನೆಯ ದಿನಗಳವು ಅಂತ ಕೆಲವರನ್ನುತ್ತಿದ್ದರೆ, ಇನ್ನೂ ಕೆಲವರು ಆಗಲೇ ಅದರ ಮೃತ್ಯುಪ್ರಕಟನೆಯನ್ನು ಬಹಿರಂಗಪಡಿಸಿದ್ದ ದಿನಗಳು. ಆ ಸಮ್ಮೇಳನದಿಂದ ನನ್ನಲ್ಲುಳಿದಿರುವ ಎರಡೇ ಎರಡು ಮಾತುಗಳು: ೧) ನಾನು ಮತ್ತೆ ಜನರ ಗಮನಕ್ಕೆ ಬರಬೇಕಾದರೆ ಪ್ರಯತ್ನ ಪೂರ್ವಕವಾಗಿಯಾದರೂ ಸಾಮಾಜಿಕ ಆಯಾಮವನ್ನು ನನ್ನ ಕಾವ್ಯಕ್ಕೆ, ಕತೆಗಳಿಗೆ ತರಬೇಕೆಂಬ ನನ್ನ ಕಾದಂಬರಿಗಾರ-ಸ್ನೇಹಿತನ ಬುದ್ಧಿವಾದ; ೨).ರಾಜಮಾರ್ಗದಲ್ಲಿ ನಡೆಯುತ್ತಿದ್ದ ಕನ್ನಡ ಕಾವ್ಯ ಅಡ್ಡದಾರಿ ಹಿಡಿಯುವಂತೆ ಮಾಡಿದ್ದೇ ನವ್ಯ ಕಾವ್ಯವೆನ್ನುವ ಅರ್ಥವನ್ನೊಳಗೊಂಡ ಕಮಲ ಹಂಪನಾ ಅವರ ಮಾತು....

ನನ್ನ ಹುಟ್ಟನ್ನು ನನ್ನ ಆಯ್ಕೆಗೆ ಯಾರೂ ಬಿಟ್ಟಿರಲಿಲ್ಲ. ಅದರ ಬಗ್ಗೆ ನಾಚುವ ಕಾರಣವಿಲ್ಲ ಅನ್ನುವ ತೀರ್ಮಾನಕ್ಕೆ ಬಂದಿದ್ದ ಹಾಗೆ ನಾನು ೭೮ರಲ್ಲಿ "ಬ್ರಾಹ್ಮಣ ಹುಡುಗ" ಕವನ ಸಂಕಲವನ್ನು ಪ್ರಕಟಿಸಿ ದೇಶಕ್ಕೆ ಬಂದಿದ್ದೆನಾದರೂ, ಬಂದ ಮೇಲೆ ಜಾಣ ಬ್ರಾಹ್ಮಣ ಅಂತ ಬ್ರಾಹ್ಮಣರಲ್ಲದ ನನ್ನ ಸ್ನೇಹಿತರು ಕರೆದ ನೆನಪಿಲ್ಲ. ನನ್ನ ಜಾಣತನ ಹೋಗಿದ್ದರಿಂದ ಹಾಗೆ ಕರೆಯುತ್ತಿಲ್ಲವೇನೋ ಅನ್ನುವ ಅನುಮಾನ ನನ್ನನ್ನು ಆಗ ಈಗ ಬಾಧಿಸಿದೆ.

ದೇಶಕ್ಕೆ ಬಂದ ಮೇಲೆ ನಾನು ಮುಖ ತೋರಿಸದೇ ಹೋದ ಸಾಹಿತ್ಯಕ ಕೂಟಗಳು ಕೆಲವೇ ಕೆಲವು, ಸೆಮಿನಾರುಗಳಲ್ಲಿ ಕೃತಿಕಾರ ಎಷ್ಟೇ ದೊಡ್ಡವನಾಗಿರಲಿ. ಅವನ ಸ್ಥಾನಮಾನಗಳನ್ನು ಗಣನೆಗೆ ತೆಗೆದು ಕೊಳ್ಳದೇ ವಸ್ತುನಿಷ್ಠೆಯಿಂದ, ನಿರ್ಭಿಡೆಯಾಗಿ,ಅವನ ಕೃತಿಗಳ ವಿಮರ್ಶೆಗೆ ನಮ್ಮ ಕೆಲವು ತರುಣ ವಿಮರ್ಶಕರು ತೊಡಗಿದ್ದನ್ನು ಕಂಡು ಸಂತೋಷ ಪಟ್ಟಿದ್ದೇನೆ. ನವ್ಯ ಸಾಹಿತ್ಯದ ಮೊದಲ ದಿನಗಳಲ್ಲಿ ಅದರ ಉದ್ದೇಶ, ಹೊಸತನಗಳ ಬಗ್ಗೆ ಧೈರ್ಯದ ಮಾತುಗಳನ್ನಾಡಿ ನವೋದಯ ಸಂಪ್ರದಾಯದ ಘಟಾನುಘಟಿಗಳನ್ನು ಎದುರಿಸಿದ ಅವೊತ್ತಿನ ವಿಮರ್ಶಕ ವೀರರು ಇವತ್ತು ಕೇವಲ ಔಪಚಾರಿಕ ಮಾತುಗಳನ್ನಾಡಿ, ಯಾರ ಮನಸ್ಸನ್ನೂ ನೋಯಿಸದೆ ಇರುವ ಕ್ಷೇಮದ ಜಾಡು ಹಿಡಿದಿದ್ದನ್ನು ಕಂಡು ಕೊರಗಿದ್ದೇನೆ. ಅರವತ್ತರಾಚೆಯ ಇವರ ಸಭ್ಯತನ ನನ್ನದಾಗದ ಹಾಗಾಗಲಿ ಅಂದುಕೊಂಡಿದ್ದೇನೆ. ಇಂತವರ ಸನ್ನಡತೆಗಿಂತ ನಮ್ಮ ತರುಣ ವಿಮರ್ಶಕರ ವಿಗ್ರಹಭಂಜಕ ಮನೋಭಾವದಿಂದ ಸೃಜನಶೀಲ ಲೇಖಕರು ಹೆಚ್ಚು ಕಲಿಯುವುದಿದೆಯೆಂದುಕೊಂಡು ಅವರ ಸಂಸಾರ ಬೆಳೆಯಲಿ ಅಂತ ಹರಸಿದ್ದೇನೆ.

ನಾನು ಗಮನಿಸಿರುವ ಇನ್ನೊಂದು ವಿಷಯ: ಯಾವನಾದರೂ ಪ್ರತಿಷ್ಠಿತ ಸಾಹಿತಿಯನ್ನು–ವೈಯಕ್ತಿಕವಾಗಲ್ಲ, ಅವನ ಕೃತಿಗಳನ್ನು–ಟೀಕಿಸಿದಾಗ ಸಿಟ್ಟು ಆ ಸಾಹಿತಿಗೆ ಬಂದಿರುವ ಸಂದರ್ಭಗಳು ಕಡಿಮೆ. ಸಿಟ್ಟು ಬಂದಿರುವುದು ಸಾಹಿತಿಯ ಚೇಲರಿಗೆ. ದೊರೆಯ ನಿಷ್ಠಾವಂತ ಭಟರಾಗಿ ಕೆಂಡಕಾರಿ ಮೈಮೇಲೆ ಹರಿಹಾಯುವವರು ಅವನ ಯೋಗ್ಯತೆಯಿಲ್ಲದ "ಮೂಲಕ ಮಹಾಶಯರು". ಇದು ಕನ್ನಡ ಸಾಹಿತ್ಯಕ್ಕೆ ಅಥವಾ ಈಚಿನ ದಿನಗಳಿಗೆ ಮಾತ್ರಾ ವಿಶಿಷ್ಟವಾದದ್ದಲ್ಲವೇನೋ. ಪುಟ್ಟಪ್ಪನವರು ತಟಸ್ಥರಾಗಿದ್ದರೂ, ಮುವತ್ತು ವರ್ಷಗಳ ಹಿಂದೆ, ಅವರ ಪರವಾಗಿ ಎದೆ ಸೆಟೆಸಿ ನಿಂತವರ ನೆನಪು ಮಾಡಿಕೊಂಡಾಗ, ದೇವರ ಹೆಸರಲ್ಲಿ ಇತಿಹಾಸದುದ್ದ ನಡೆದು ಬಂದಿರುವ ಹೋರಾಟಗಳೂ ನೆನಪಾಗುತ್ತವೆ.

ನನ್ನ ಸಾಹಿತ್ಯಕವಾದ ಒಲವು ವಿಶೇಷವಾಗಿ ಕಾವ್ಯದತ್ತ ಹರಿಯುವುದರಿಂದ ಇವೊತ್ತಿನ ಕನ್ನಡ ಕಾವ್ಯದ ಬಗ್ಗೆ ಮಾತಾಡುವ ಆಸೆಯನ್ನು ಹತ್ತಿಕ್ಕಲಾರೆ. ಕನ್ನಡದ ನವೋದಯ ಆರಂಭವಾದಂದಿನಿಂದ ಕಂಡು ಬಂದ ಚಳುವಳಿಗಳು ಪ್ರಧಾನವಾಗಿ ಮೂರು. ನವೋದಯ ಪ್ರಗತಿಶೀಲ ಹಾಗೂ ನವ್ಯ ಚಳುವಳಿಗಳು. ಅವುಗಳ ಮನೋಧರ್ಮವನ್ನು ಪ್ರತಿನಿಧಿಸುವ ಕವಿಗಳು ಇವೊತ್ತಿನ ದಿನಗಳಲ್ಲಿಯೂ ಬರೆಯುತ್ತಿರುವುದು ಒಂದು ವಿಶೇಷ. ಬೇಂದ್ರೆ ಹಾಗೂ ಇತ್ತೀಚೆಗೆ ಮಾಸ್ತಿ ತೀರಿಕೊಂಡರು, ಪುಟ್ಟಪ್ಪನವರು ಕಾವ್ಯರಚನೆಯನ್ನು ಬಿಟ್ಟುಕೊಟ್ಟಿದ್ದರೂ, ನಮ್ಮ ಮಧ್ಯೆ ಪು.ತಿನ.,ಮುಗಳಿ ಅಂತಹವರಿದ್ದಾರೆ, ಕವನಗಳನ್ನು ಬರೆಯುತ್ತಿದ್ದಾರೆ. ಜೊತೆಗೆ ನವೋದಯ ಮನೋಧರ್ಮದ ಪ್ರಭಾವ ಅಷ್ಟು ಸುಲಭವಾಗಿ ಮರೆಯಾಗುವಂತಹದಲ್ಲ ಅನ್ನುವುದನ್ನು ಸಾಬೀತುಪಡಿಸುವ ಹಾಗೆ, ಅದನ್ನು,

ಕೊಂಚ ವ್ಯತ್ಯಾಸ ಮಾಡಿಕೊಂಡು, ಬರೆಯುತ್ತಿರುವ ವೆಂಕಟೇಶಮೂರ್ತಿ. ನವ್ಯ ಕಾವ್ಯದಲ್ಲಿ ಭಾವ ತೆರೆಮರೆಗೆ ಹೋಯಿತು, ಬುದ್ಧಿಯೊಂದೇ ರಂಗಮಧ್ಯದಲ್ಲಿ ರಾರಾಜಿಸಿತು ಅನ್ನುವ ಸ್ಫುರಣೆಯಿಂದ ಭಾವಲೋಕದ ಬಾಗಿಲನ್ನು ಮತ್ತೆ ತೆರೆಯುವ ಪ್ರಯತ್ನದಲ್ಲಿ ತೊಡಗಿರುವ ನಾಡಿಗ. ಮದುವೆಯಾಚೆಗೆ ಸಂಬಂಧವೊಂದನ್ನು ಕುದುರಿಸಿಕೊಂಡು, ಆ ಸಂಬಂಧದಿಂದ ಸುಖ ಪಡೆದರೂ ನೆನೆಗುದಿಗೆ ಸಿಕ್ಕಿ ಮನೆಗೆ ಬಂದಿರುವ ನರಸಿಂಹಸ್ವಾಮಿ.

ಎಲ್ಲಕ್ಕಿಂತ ಹೆಚ್ಚಾಗಿ, ಆ ಕಾಲದಲ್ಲಿದ್ದಂತೆ ಕಾವ್ಯಕ್ಕೂ ಸಂಗೀತಕ್ಕೂ ಅಂಟಿಬರುತ್ತಿರುವ ನಂಟು. ಕೆಸೆಟ್ಟುಗಳ ಕಟ್ಟಿಂದ ಉಕ್ಕುವ ಸುಗಮ ಸಂಗೀತ: ಚಂದ್ರ, ಮೋಡ, ಹೂವು, ಮುಳ್ಳು, ದೇಹ ಬೇಡದ ಸ್ನೇಹ, ಇತ್ಯಾದಿ. 'ಒತ್ತಕ್ಷರಗಳಿದ್ದರೆ ಹಾಡುವವರಿಗೆ ಕಷ್ಟ'ವೆಂದು ಹಗುರವಾಗಿರುವ ಮಾತುಗಳ ಹೆಣಿಗೆ, ಅಪ್ಯಾಯಮಾನವೆನ್ನಿಸುವ ಪ್ರಾಸಗಳು. ಲಕ್ಷ್ಮೀನಾರಾಯಣಭಟ್ಟ, ಲಕ್ಷ್ಮಣರಾವ್, ವೆಂಕಟೇಶಮೂರ್ತಿ,ವ್ಯಾಸರಾವ್, ದೊಡ್ಡರಂಗೇಗೌಡ, ಇತ್ತೀಚೆಗೆ ತಿರುಮಲೇಶ್....ದಾಸಪಂಥದ ದೊಡ್ಡಬಳಗವೇ ಇದೆ. ಸೀರಿಯಸ್ ಕವಿಗಳೆಂದುಕೊಂಡವರಿಗೆ ಈ ತರಹದ ರಚನೆಗಳನ್ನು ಬಿಟ್ಟು ಕೊಡಲಾಗದ ಪರಿಸ್ಥಿತಿ. ಗಟ್ಟಿ ಧ್ವನಿಯಲ್ಲಿ ತಾವು ಬರೆಯುತ್ತಿರುವುದನ್ನು ಸಮರ್ಥಿಸಿಕೊಳ್ಳುವಾಗಲೂ ಒಳಗೊಳಗೇ ಅಳುಕು. ತಮ್ಮ ರಚನೆಗಳು ಹಾಡುಗಳು, ಕಾವ್ಯದ ಅಂಶಗಳಿದ್ದರೂ, ಅವನ್ನು ಕಾವ್ಯವೆಂದು ಪರಿಗಣಿಸಬೇಕಾಗಿಲ್ಲ, ಅನ್ನುವ ವಾದವನ್ನು ಭಟ್ಟರು ಮಂಡಿಸಿದರೆ, ನನ್ನದು ಮುಕ್ತಮನಸು, ಎಲ್ಲ ವಸ್ತುಗಳಿಗೂ ಕಾವ್ಯದಲ್ಲಿ ಅವಕಾಶವಿರಬೇಕಾದಂತೆ ಎಲ್ಲ ಪ್ರಕಾರಗಳೂ ನಾನು ಒಡ್ಡಿಕೊಂಡಿದ್ದೇನೆ ಅನ್ನುವ ತಿರುಮಲೇಶರ ವಾದ.

ಈ ಕವಿಗಳು ತಮ್ಮ ಕೆಸಟ್ಟುಗಳ ಮೂಲಕ ಜನಪ್ರಿಯರಾಗಿದ್ದಾರೆ. ಜನಕ್ಕೆ ಕಾವ್ಯವನ್ನು ಕರೆದೊಯ್ಯುತ್ತಿದ್ದೇವೆ, ನಿಜ ನಿಧಾನವಾಗಿಯಾದರೂ ಸೀರಿಯಸ್ ಕಾವ್ಯದ ಕಡೆಗೆ ಬರುತ್ತಾರೆ ಅನ್ನುವ ಇವರ ಮಾತುಗಳು ರ್‍ಯಾಷನಲೈಸೇಷನ್ ಮಾದರಿಯವು. ಅಥವಾ ಇವರು ಕಾವ್ಯ ಎಂದೆಂದಿಗೂ ಮೈನಾರಿಟಿಗೆ ಹೇಳಿದ ಕಲಾಪ್ರಕಾರವೆಂದು ಒಪ್ಪಿಕೊಳ್ಳಲು ಸಿದ್ಧವಾಗಿಲ್ಲದ ರೊಮ್ಯಾಂಟಿಕ್ ಜನ.

ಇವರ ಜೊತೆ ನಾನು ವಾದ ಮಾಡಿ ಸೋತಿದ್ದೇನೆ. ಸೀರಿಯಸ್ ಕವಿಯಾದವನು ಇಂಥ ರಚನೆಗಳಿಗೆ ಮನಸೋತಾಗ ಅವನ ಸೃಷ್ಟಿ ಪ್ರಕ್ರಿಯೆಯೇ ವಿಕೃತವಾಗುವ ಸಂಭವವಿದೆ ಅನ್ನುವುದು ನನ್ನ ನಂಬಿಕೆ. ನನ್ನ ನಿಲುವು ಸರಿಯಿಲ್ಲದೇ ಇರಬಹುದು. ಆದರೂ, ಒಮ್ಮೆ ಇವರಲ್ಲೊಬ್ಬರು "ರಾಜಕುಮಾರ್ ಹಾಡಲೊಪ್ಪಿರುವ ಕೆಸೆಟ್ ಒಂದಕ್ಕೆ ನಿಮ್ಮದೊಂದು ಕವನ ಬೇಕು. ಇನ್ನೆರಡು ಮೂರು ದಿನಗಳಲ್ಲಿ ಬರೆದುಕೊಡಿ." ಅಂದಾಗ, ಗಳಿಗೆ ಮೋಹಗೊಂಡು, ಆಮೇಲಿನ ಎರಡು ದಿನಗಳವರೆಗೆ ಹೂವು,ಮೋಡ,ಹೆಣ್ಣು, ಕಣ್ಣು,ಚಂದ್ರರನ್ನು ಪ್ರಾಸಬದ್ಧವಾದ

ಒತ್ತಕ್ಷರಗಳಿಲ್ಲದ ಚಂದ ಮಾತುಗಳಲ್ಲಿ ಬೆಸೆಯುವ ಸ್ವಭಾವವಿರುದ್ಧವಾದ ಕಾರ್ಯಕ್ಕೆ ತೊಡಗುವವದರಲ್ಲಿದ್ದೆ ಅನ್ನುವುದು ನೆನಪಾದಾಗ ಗಾಬರಿಯಾಗುತ್ತದೆ.

ಇವೊತ್ತಿನ ಬಂಡಾಯ ಸಾಹಿತ್ಯಕ್ಕೂ ಆಗಿ ಹೋದ ಪ್ರಗತಿಶೀಲ ಸಾಹಿತ್ಯಕ್ಕೂ ಇರಬಹುದಾದ ವ್ಯತ್ಯಾಸ ನನಗಂತೂ ಸ್ಪಷ್ಟವಾಗಿಲ್ಲ. ಗದ್ಯದಲ್ಲಿ ಒಂದಿಷ್ಟು ಗಮನಾರ್ಹವಾದದ್ದನ್ನು ಸಾಧಿಸಿದ ಪ್ರಗತಿಶೀಲ ಸಾಹಿತ್ಯ ಚಳುವಳಿ ಇವೊತ್ತು ನಾವು ಕೃತಜ್ಞತೆಯಿಂದ ನೆನೆಯಬಹುದಾದ ಒಬ್ಬ ಕವಿಯನ್ನೂ ಕೊಡಲಿಲ್ಲವೆನ್ನುವುದು ನನ್ನ ಪಾಲಿಗೆ ಅರ್ಥಪೂರ್ಣವೆನ್ನಿಸಿದೆ. ಇವೊತ್ತು ಬಂಡಾಯ ಕಾವ್ಯದ ಹೆಸರಿನಲ್ಲಿ ಬರುತ್ತಿರುವ ಕವನಗಳಲ್ಲಿರುವ ಸ್ಥಾಯೀ ಭಾವವೆಂದರೆ ಸಿಟ್ಟು, ಶೋಷಣೆಯ ಬಗ್ಗೆ ಆಕ್ರೋಶ. ಉತ್ತಮ ಕಾವ್ಯಕ್ಕೆ ಅಷ್ಟು ಸಾಲದು. ಎಲ್ಲಕ್ಕಿಂತ ಹೆಚ್ಚಾಗಿ, ರೋಷದ ಮಾತುಗಳಿಗೆ ಗದ್ಯ ಕೆಲಸಕ್ಕೆ ಬರುವಂತೆ ಪದ್ಯ ಬರಲಾರದು. ಎಲ್ಲಿಯವರೆಗೆ ಒಂದು ಸಾಹಿತ್ಯ ಪ್ರಕಾರ ಬದುಕನ್ನು ಆಂಶಿಕವಾಗಿ ನೋಡುತ್ತದೆಯೋ ಅಲ್ಲಿಯವರೆಗೆ ಅದು ಅದ್ಭುತವಾದದ್ದನ್ನು ಸಾಧಿಸಲಾರದು. ಬದುಕನ್ನು ಹೀಗೆ ನೋಡುವುದು ಅನುಭವದ ಸರಳೀಕರಣದಲ್ಲಿ ಪರ್ಯಾವಸಾನವಾಗುತ್ತದೆ. ಇದೂ ಒಂದು ಘಟ್ಟಕ್ಕೆ ಬಂದು ಸ್ಥಗಿತಗೊಂಡಿದ್ದರ ಸೂಚನೆ.

ನವ್ಯ ಕಾವ್ಯದ ಮೂಲ ಪುರುಷರಾದ ಅಡಿಗರು ಈಗಲೂ ಬರೆಯುತ್ತಿದ್ದಾರೆ. ಅವರ ಇತ್ತೀಚಿನ 'ಕವನಸಂಗ್ರಹಗಳು ನಮ್ಮ ನಿರೀಕ್ಷಣೆಯ ಆಚೆಗೆ ನಿಲ್ಲುವ ಸಾಮರ್ಥ್ಯವನ್ನು ಹೊರಗೆಡಹದೇ ಹೋದರೂ, ಮಂದಾಸನದ ಮೇಲೆ ಕೂತು ಎತ್ತರದಿಂದ ಜನಕ್ಕೆ ಉಪದೇಶಾಮೃತಗಳನ್ನು ಹಂಚುವ ಅವರ ಚಟ ಬೇಸರ ತಂದರೂ, ಅನಿರೀಕ್ಷಿತವಾದದ್ದನ್ನು ಗುಂಡಿನಂತಹ ಮಾತುಗಳಲ್ಲಿ ಕೊಡಬಲ್ಲ ಅಡಿಗರ ಕಾವ್ಯಸೃಷ್ಟಿಗೆ ಮಂಗಳ ಹಾಡುವುದು ಉದ್ಧಟತನವಾದೀತು.

ಇನ್ನು, ನವ್ಯೋತ್ತರ ಕಾವ್ಯವೆನ್ನುವ ಹೆಸರಿನಲ್ಲಿ ಕೆಲವರು ಮಾಡುತ್ತಿರುವ ಪ್ರಯತ್ನ. ನವ್ಯಕಾವ್ಯದ ಕತೆ ಮುಗಿಯಿತೆಂದು ಒಪ್ಪಿಕೊಳ್ಳದ ನನಗೆ ಅದರಲ್ಲಿ ಅಂತಹ ವಿಶಿಷ್ಟವಾದದ್ದೇನೂ ಕಂಡಿಲ್ಲ. ಹೇಳುವುದಕ್ಕೆ ಯುಕ್ತವಾದ ಕ್ರಮವನ್ನು ಹುಡುಕಬೇಕಾಗಿಲ್ಲ, ತುರ್ತಿದ್ದಾಗ ತನ್ನದೇ ಆದ ಛಂದಸ್ಸನ್ನು ಕಟ್ಟಿಕೊಂಡು ಅದು ಬರುತ್ತದೆಂದು ನಂಬಿರುವ ನನಗೆ ಇವೊತ್ತು ಮತ್ತೆ ಕನ್ನಡ ಕಾವ್ಯಕ್ಕೇ ಭಾಮಿನೀಷಟ್ಪದಿಯನ್ನು ತರುವ ಅಗತ್ಯ ಕಾಣುವುದಿಲ್ಲ. ಕತೆ ಹೇಳುವುದು ನನ್ನ ಉದ್ದೇಶವಾದರೆ ಕಾವ್ಯವಾಗಿ ಹೇಳಬೇಕಾಗಿಲ್ಲ, ನಿಜವಾದೊಂದು ಕವನಕ್ಕೆ ಸಂಗೀತದ ಆಸರೆ ಬೇಡವೆಂದೇ ನಂಬಿರುವ ನನಗೆ ಈಚಿನ ಕೆಲವು ಕವಿಗಳು ಮಾಡುತ್ತಿರುವುದರ ಅರ್ಥ ಹೊಳೆಯುತ್ತಿಲ್ಲ. ಇಷ್ಟಾದರೂ ವೆಂಕಟೇಶಮೂರ್ತಿ, ಲಕ್ಷ್ಮಣರಾವ್ ಹಾಗೂ ಇತರರ ಕೆಲವು ಕವನಗಳು ನನಗೆ ಖುಷಿಕೊಟ್ಟಿವೆ. ಶಿವಪ್ರಕಾಶ್ ಎಂಥದೋ ಹೊಸದನ್ನು ಸಾಧಿಸಹೊರಟಿದ್ದಾರೆ ಅನ್ನಿಸಿದೆ. ಈಚೆಗೆ ಕಣ್ಣಿಗೆ ಬಿದ್ದ ಸ.ರಘುನಾಥರ ಹಾಗೂ ವಿಜಯರಾಘವನ್ ಅವರ ಕೆಲವು ಕವನಗಳಲ್ಲಿನ ನಿಗೂಢತೆ ಕಾವ್ಯ

ತನ್ನ ನವ್ಯ ಕಾವ್ಯದ ದಿನಗಳ ಸಂಕೀರ್ಣತೆಯನ್ನು ಬಿಟ್ಟುಕೊಡುತ್ತಿಲ್ಲವಲ್ಲ ಅನ್ನುವ ಸಮಾಧಾನ ತಂದಿದೆ.

ಈ ಮೂರು ವರ್ಷಗಳಲ್ಲಿ ಭಾರತದ ಎಲ್ಲ ಭಾಷೆಗಳಿಗೂ ಸಂಬಂಧಪಟ್ಟ ಸೆಮಿನಾರುಗಳಲ್ಲಿ ಭಾಗವಹಿಸಿದಾಗ ಅನ್ನಿಸಿದ್ದು: ಕನ್ನಡ ಸಾಹಿತ್ಯ–ಎಲ್ಲ ಪ್ರಕಾರಗಳೂ ಸೇರಿದಹಾಗೆ–ಇವತ್ತು ಶ್ರೀಮಂತವಾಗಿದೆ. ನಾಚುವ ಬದಲು ತಲೆಯೆತ್ತಿ ನಡೆಯುವಷ್ಟು ಗುಣ ಪಡೆದಿದೆ.

ನನ್ನ ಸಾಹಿತ್ಯ ವ್ಯವಸಾಯದಿಂದ ಆರಂಭವಾದ ಪ್ರಬಂಧ ನನ್ನ ಬಗೆಗಿನ ಮಾತುಗಳಿಂದಲೇ ಮುಗಿಯಬೇಕೇನೋ.

ಅನ್ನಿಸಿದ್ದನ್ನು ದಾಕ್ಷಿಣ್ಯವಿಲ್ಲದ ಹಾಗೆ ಹೇಳಬೇಕೆನ್ನುವ ಛಲ ತೊಟ್ಟು ಬಂದ ನಾನು ಆಡಿದ ಮಾತುಗಳು ಹಲವರಿಗೆ ಹಿಡಿಸಿಲ್ಲ. ನನಗೆ ಯಾವ ವ್ಯಕ್ತಿಯ ಬಗ್ಗೆಗೂ ದ್ವೇಷವಿಲ್ಲ, ಸಾಹಿತ್ಯಕವಾದ ನನ್ನ ನಿಲುವಿನಲ್ಲಿ ಜಾತಿ, ಮತಗಳಂತಹ ಕ್ಷುದ್ರ ಲೆಕ್ಕಾಚಾರ ಪಾತ್ರ ವಹಿಸಿಲ್ಲವೆಂದುಕೊಂಡಿದ್ದೇನೆ. ನನ್ನ ಸ್ನೇಹಿತರಾದ ಕೆಲವು ಸಾಹಿತಿಗಳು ತುಂಬ "ಸೆನ್ಸಿಟಿವ್" ಆಗಿ, ಅವರ ಕೃತಿಗಳ ಬಗ್ಗೆ ಬೇರೆಯವರು ಆಡಿದ್ದನ್ನು ಅವರ ಇಡೀ ಬದುಕಿನ ಬಗ್ಗೆ ಮಾಡಿದ ಮೌಲ್ಯಮಾಪನವೇನೋ ಅನ್ನುವಂತೆ ಪರಿಗಣಿಸಿ, ಒಬ್ಬರು ಬರೆದು ಪ್ರಕಟಿಸಿದ ಮೇಲೆ ಅದಕ್ಕೆ ಅದರದೇ ಅಸ್ತಿತ್ವ ಪ್ರಾಪ್ತವಾಗುತ್ತದೆ. ನಾವು ಹುಟ್ಟಿಸಿ ಬೆಳೆಸಿದ ಮಕ್ಕಳ ಹಾಗೆ.ಅವರ ಸಮರ್ಥನೆಯನ್ನು ತಂದೆಯಾದವನು ಸದಾಮಾಡುವ ಅಗತ್ಯವಿರಬಾರದು.

ಪರಿಷತ್ತಿನಂತಹ ಸಂಸ್ಥೆಗಳ ಅವ್ಯವಹಾರಗಳು, ವೈಯಕ್ತಿಕ ರಾಗ ದ್ವೇಷಗಳ ಮೇಲೆ ಆಧಾರಿತವಾದ ವಿಮರ್ಶೆ, ಅಡಿಗರ "ಏನಾದರೂ ಮಾಡುತಿರು, ತಮ್ಮ" ಕವನವನ್ನು ಉದ್ದೇಶಪೂರ್ವಕವಾಗಿ ಅಪಾರ್ಥಮಾಡಿಕೊಂಡು ಕವಿ ಕ್ರೌರ್ಯವನ್ನು ಪ್ರತಿಪಾದಿಸುತ್ತಿದ್ದಾನೆಂದು ಬರೆದ ಪೋಲಂಕಿಯ ಮಾತುಗಳು, ಕನ್ನಡ, ಇಂಗ್ಲಿಷ್ "ಚಂದನ"ದ ಪುಟಪುಟಗಳಿಂದ ಎದ್ದು ನಿಲ್ಲುವ ನಿಸಾರ್ ಅಹಮದರ ಮುಖ ಕೆಲವೊಮ್ಮೆ ಅಕಾರಣವಾಗಿಯಾದರೂ ಒಬ್ಬನ ನಡತೆಯ ಬಗ್ಗೆ ಬರೆಯುವಾಗ ಲಂಕೇಶ ಪತ್ರಿಕೆ ತಂದು ತುರುಕುವ "ಬ್ರಾಹ್ಮಣ" ಪದ, ಪರಸ್ಪರ ಬೆನ್ನು ತಟ್ಟಿ ಸಮಾಧಾನ ಪಟ್ಟುಕೊಳ್ಳುವ ಕೆಲವರ ರೀತಿ, ಕನ್ನಡಕ್ಕೆ ಗಜಲ್ ತಂದದ್ದು ನಾನು ಅನ್ನುವ ಲಕ್ಷ್ಮೀನಾರಾಯಣಭಟ್ಟ ಹಾಗೂ ಲಕ್ಷ್ಮಣರಾಯರ ಪಟನಿರ್ಟಿಯ ಜಗಳ, ಕರ್ನಾಟಕ ಸ್ವತಂತ್ರ ರಾಜ್ಯವಾಗಬೇಕೆಂಬ ಚಿದಾನಂದಮೂರ್ತಿ ಅವರ ಹುಚ್ಚು ಮಾತು...

ಇವೆಲ್ಲದರ ಮಧ್ಯೆ ಬರೆಯುತ್ತಲೇ ಹೋಗಬೇಕು. ನಮಗೆ ನಾವೇ ಮೋಸ ಮಾಡಿಕೊಳ್ಳದ ಹಾಗೆ, ನಾವು ಆರಿಸಿಕೊಂಡ ಸಾಹಿತ್ಯ ಪ್ರಕಾರಕ್ಕೆ ಮೋಸ ಮಾಡದ ಹಾಗೆ, ಬದುಕಿಗೆ ಬರಹ ಅನಿವಾರ್ಯವೆನ್ನುವ ಹಾಗೆ, ಬರೆಯುತ್ತಲೇ ಹೋಗಬೇಕು.

–ಸಾಭಾರ–ಪುಸ್ತಕ ಪ್ರಪಂಚ

* * *

ಭಾಷಾ ವಿನಾಶವು ಬೌದ್ಧಿಕ ಆಸ್ತಿ ವಿನಾಶವೆ ಆಗಿದೆ

-ಮಿಯಾವೊಕ ಹೊಸೋಹಿತೊ

ಒಂದು ಅಂದಾಜಿನ ಪ್ರಕಾರ ವಿಶ್ವದಲ್ಲಿ ಈಗ ಪ್ರಚಲಿತವಿರುವ ಭಾಷೆಗಳ ಸಂಖ್ಯೆ ೬೭೬೦. ಈ ಸಂಖ್ಯೆಯಲ್ಲಿ ಚೈನೀಸ್ ಮತ್ತು ಇಂಗ್ಲೀಷ್‌ನಂಥ ಪ್ರಮುಖ ಭಾಷೆಗಳ ಜೊತೆಗೆ ಅಲಾಸ್ಕದ ಹಿಮಚ್ಛಾಧಿತ ಪ್ರದೇಶದಲ್ಲಿ ಒಬ್ಬನೇ ಒಬ್ಬ ಮಾತನಾಡುವ ಇಯಾಕ್ (Eyak) ಎಂಬ ಭಾಷೆಯೂ ಸೇರಿದೆ. ಈ ಭಾಷೆಗಳಲ್ಲಿ ಶೇ.೯೬ರಷ್ಟು ಭಾಷೆಗಳು ಅಂದರೆ ಸುಮಾರು ೬೫೦೦ ಭಾಷೆಗಳನ್ನು ವಿಶ್ವ ಜನಸಂಖ್ಯೆಯ ಕೇವಲ ಶೇ೪ರಷ್ಟು ಜನರು ಮಾತ್ರ ಮಾತನಾಡುತ್ತಾರೆ. ಇನ್ನು ಕೇವಲ ಶೇ ೪ ರಷ್ಟು ಭಾಷೆಗಳನ್ನು ಶೇ ೯೬ ರಷ್ಟು ಜನರು ಮಾತನಾಡುತ್ತಾರೆ. ನಿಜವಾಗಿಯೂ ಅಷ್ಟು ಮಹತ್ವವಲ್ಲದ ಈ ಭಾಷೆಗಳು ಪರಿಸರದಲ್ಲಿ ವಿನಾಶಗೊಳ್ಳುತ್ತಿರುವ ಪ್ರಾಣಿಗಳು ಮತ್ತು ಗಿಡಮೂಲಿಕೆಗಳ ವಿನಾಶದ ವೇಗದಲ್ಲಿಯೆ ನಾಶ ಹೊಂದುತ್ತಿವೆ. ಈ ಭಾಷೆಗಳ ಇರುವಿಕೆ ನಗಣ್ಯವಾಗಿದೆ ಅಥವಾ ನಗಣ್ಯವಾಗಿ ಮಾಡಲಾಗುತ್ತಿದೆ. ಯಾವುದೇ ಒಂದು ಭಾಷೆಯ ಉಪಯುಕ್ತತೆಯ ಅಳತೆಗೋಲು ಆ ಭಾಷೆಯನ್ನು ಎಷ್ಟು ಜನ ಮಾತನಾಡುತ್ತಾರೆ ಎಂಬುದಕ್ಕಿಂತ ಆ ಭಾಷೆಯನ್ನು ಎಷ್ಟು ಮಕ್ಕಳು ಅದನ್ನು ತಮ್ಮ ಪ್ರಾದೇಶಿಕ ಭಾಷೆಯೆಂದು ಕಲಿಯುತ್ತಾರೆ ಎಂಬುದೇ ಆಗಿದೆ. ಯಾವುದಾದರೊಂದು ಪ್ರಾದೇಶಿಕ ಭಾಷೆಯನ್ನು ಮಕ್ಕಳು ಕಲಿಯುವುದನ್ನು ನಿಲ್ಲಿಸಿದರೆ ಆ ಭಾಷೆಯ ಸಾಗಾಣಿಕೆಯ ಕೊಂಡಿ ಮುರಿದು ಹೋದಂತೆಯೇ. ಈ ಸಂಗತಿಯನ್ನು ಈಗಾಗಲೆ ತನ್ನ ಸಂತಾನೋತ್ಪತ್ತಿಯ ಸಾಮರ್ಥ್ಯವನ್ನು ಕಳೆದುಕೊಂಡಿರುವ ಕೆಲ ಪ್ರಾಕೃತಿಕ ಪ್ರಾಣಿವರ್ಗಕ್ಕೆ ಹೋಲಿಸಬಹುದು.

ಪ್ರೊ॥ ಮೈಕೆಲ್ ಇ ಕ್ರೊಸಸ್‌ರ(Michael E Krauss) ಮುನ್ಸೂಚನೆಯ ಪ್ರಕಾರ ೬೦೦೦ ಕ್ಕಿಂತ ಸ್ವಲ್ಪ ಹೆಚ್ಚಿನ ಸಂಖ್ಯೆಯಲ್ಲಿರುವಂಥ ಇಂದಿನ ಭಾಷೆಗಳಲ್ಲಿ ಅರ್ಧದಷ್ಟು ಭಾಷೆಗಳು ೨೧೦೦ ನೇ ಇಸವಿಯ ವೇಳೆಗೆ ಕಣ್ಮರೆಯಾಗುವುವು ಮತ್ತು ಅವುಗಳಲ್ಲಿ ಶೇ೯೫ರಷ್ಟು ಭಾಷೆಗಳು ನಾಶವಾಗುವುವು ಇಲ್ಲವೆ ವಿನಾಶದ ತುದಿ ತಲುಪುವವು. ಸುಮಾರು ೩೦೦ ಭಾಷೆಗಳು ಅಂದರೆ ಇಂದಿನ ಒಟ್ಟು ಭಾಷೆಯ ಶೇ ೫ ರಷ್ಟು ಭಾಷೆಗಳ ಉಳಿಯುವಿಕೆ ಸಧ್ಯಕ್ಕೆ ಮಾತ್ರ ಸಾಧ್ಯವಿದೆ. ಹಾಲಿ ಇರುವ ಭಾಷೆಗಳನ್ನು ಕ್ರೊಸಸ್ ಮೂರು ರೀತಿಯಲ್ಲಿ ವಿಂಗಡಿಸುತ್ತಾರೆ.

೧) ಮಕ್ಕಳು ತಮ್ಮ ಮಾತೃಭಾಷೆಯೆಂದು ಕಲಿಯುವುದನ್ನು ನಿಲ್ಲಿಸಿರುವುದರ ಪ್ರಯುಕ್ತ ಮರಣಾವಸ್ಥೆಯಲ್ಲಿರುವ ಭಾಷೆಗಳು;

೨) ಶೇ.೨೫ರಿಂದ ೫೦ರಷ್ಟು ಅಪಾಯದ ಅಂಚಿನಲ್ಲಿರುವ ಭಾಷೆಗಳು

೩) ಶೇ.೪೦ರಿಂದ ೦೫ಸುರಕ್ಷಿತ ಭಾಷೆಗಳು

ನಾವು ಉಸಿರಾಡುವ ಗಾಳಿ ಕಲಷಿತವಾದಾಗ ಮಾತ್ರ ನಮ್ಮ ಗಮನಕ್ಕೆ ಬರುತ್ತದೆ ಅದೇ ರೀತಿ ಭಾಷೆ. ಪ್ರಯತ್ನಪೂರ್ವಕವಾಗಿ ಗಮನದಲ್ಲಿಟ್ಟುಕೊಳ್ಳಬೇಕಾದಂಥ ವಸ್ತು ಭಾಷೆಯಾಗಿರುವುದಿಲ್ಲ. ಆದ್ದರಿಂದ ಅಪಾಯಕ್ಕೊಳಗಾಗಿರುವ ಭಾಷೆಗಳ ಬಗ್ಗೆ ಇರಬೇಕಾದ ಎಚ್ಚರಿಕೆ ನಮ್ಮ ಜನರಲ್ಲಿ ಬಹಳ ಕಡಿಮೆ ಪ್ರಮಾಣದಲ್ಲಿದೆ. ಅಪಾಯದ ಅಂಚಿನಲ್ಲಿರುವ ಭಾಷೆಗಳ ಬಗ್ಗೆ ಈ ಜಾಗೃತಿ ಇಲ್ಲದಿರುವಿಕೆಯು ಕೇವಲ ಜನಸಾಮಾನ್ಯರಲ್ಲಷ್ಟೆ ಅಲ್ಲ ಸರ್ಕಾರಿ ಅಧಿಕಾರಿಗಳಲ್ಲಿಯೂ, ಪಂಡಿತರಲ್ಲಿಯೂ ಸಹ ಇದೆ. ಈ ವಿಷಯ ಜೀವ ಜಗತ್ತಿನಲ್ಲಿ ಆಗುತ್ತಿರುವ ವಿನಾಶದ ವೇಗ ಮತ್ತು ಪ್ರಮಾಣಕ್ಕಿಂತ ಹೆಚ್ಚಾಗಿದೆಯೆಂದು ಹೇಳಲಾಗುತ್ತಿದ್ದರೂ ಕೂಡ ಜೀವ ಜಗತ್ತಿನಲ್ಲಿಯ ವಿನಾಶವನ್ನು ಸುಲಭವಾಗಿ ಗುರ್ತಿಸಬಹುದು. ಪ್ರತಿಯೊಂದು ಪ್ರಕಾರದ ಸಸ್ಯ ಅಥವಾ ಪ್ರಾಣಿಯ ಜೀವಕ್ಕೆ ತನ್ನದೇ ಆದ ಬೆಲೆ ಮತ್ತು ಕ್ರಿಯೆ ಇದೆಯೆಂದು ತಿಳಿಯಬಹುದಾಗಿದೆ. ಆದ್ದರಿಂದ ಜೀವ ಜಗತ್ತಿನಲ್ಲಿ ಆಗುತ್ತಿರುವ ನಷ್ಟದ ಬಗ್ಗೆ ಜನರು ಬಹಳ ಭಾವನಾತ್ಮಕವಾಗಿ ಸ್ಪಂದಿಸುತ್ತಾರೆ. ಆದರೆ ಭಾಷಾವಿಷಯಕ್ಕೆ ಬಂದಾಗ ಪರಿಸ್ಥಿತಿ ಇದಕ್ಕೆ ತದ್ವಿರುದ್ಧವಾಗಿರುತ್ತದೆ. ಯಾವುದೇ ಒಬ್ಬ ವ್ಯಕ್ತಿಗೆ ಭಾಷಾವಿಷಯದಲ್ಲಿಯ ನಷ್ಟದ ಬಗ್ಗೆ ತೀವ್ರವಾಗಿ ಸ್ಪಂದಿಸುವುದು ಸಲಭ ಸಾಧ್ಯವಿಲ್ಲ. ವಿನಾಶವೆಂಬುದು ಒಂದು ಸ್ವಾಭಾವಿಕ ಕ್ರಿಯೆಯೆಂದು ಭಾವಿಸಲಾಗುತ್ತದೆ. ಒಂದೊಂದು ಭಾಷೆಯು ಒಂದೊಂದು ಸಮಯ ಬಂದಾಗ ನಷ್ಟವಾಗಲೆಬೇಕೆಂದು ಭಾವಿಸಲಾಗುತ್ತದೆ. ಈ ಸಂಗತಿ ಯಾವುದಾದರೊಂದು ಜನ ಸಮುದಾಯ ಬೇರೊಂದು ಜನಸಮುದಾಯದ ಪ್ರಭಾವದಿಂದ ಕುಂಠಿತಗೊಳ್ಳುತ್ತಿದ್ದರೆ ಆ ಸಮಯದಲ್ಲಿ ಆ ಸಮುದಾಯದ ಭಾಷೆಗಳ ಅವನತಿ ಇನ್ನೂ ಗೋಚರಿಸದೆ ಹೋಗುತ್ತದೆ. ತನ್ನ ಭಾಷೆಗಳು ಅವನತಿ ಹೊಂದಿತ್ತಿವೆ ಎಂದು ಆ ಸಮುದಾಯ ತಿಳಿಯದೆ ಹೋಗಬಹುದು. ಭಾಷಾ ಅವನತಿಯ ಬಗ್ಗೆ ಕಾಳಜಿಯ ಕೊರತೆಗಾಗಿ ಇನ್ನೊಂದು ಕಾರಣವೆನೆಂದರೆ ಭಾಷೆ ಎಂಬುದು ಕೇವಲ ಸಂವಾದದ ಒಂದು ಸಾಧನವೆಂದು ಪರಿಗಣಿತವಾಗಿರುವುದು. ಆದರೆ ಭಾಷೆಗೆ ಸಂವಾದದ ಕ್ರಿಯೆಯಲ್ಲದೆ ಇನ್ನೊಂದು ವಸ್ತುವನ್ನು ಗುರ್ತಿಸುವ ಮತ್ತು

ಅದನ್ನು ತಿಳಿಯುವ ಈ ಮುಂತಾದ ಕ್ರಿಯೆಗಳೂ ಇವೆ.

ಸಂವಾದವು ಯಾವುದೇ ಒಂದು ಭಾಷೆಯ ಮಹತ್ವದ ಕ್ರಿಯೆಯೇನೊ ಹೌದು. ಆದರೆ ಅದೊಂದೇ ಭಾಷೆಯ ಕ್ರಿಯೆ ಅಲ್ಲ. ಭಾಷೆಯು ಒಂದು ಜನಪದದ ಸಂಸ್ಕೃತಿ ಹಾಗೂ ಸಾಮಾಜಿಕ ಅಸ್ತಿತ್ವದ ಅವಿಭಾಜ್ಯ ಅಂಗವೂ ಆಗಿದೆ. ನನ್ನ ಅಭಿಪ್ರಾಯದಲ್ಲಿ ಸಂಸ್ಕೃತಿ ಎಂಬುದು ಮುಖ್ಯವಾಗಿ ಎರಡು ಅರ್ಥದಲ್ಲಿದೆ. ಒಂದನೆಯದು ಸಾಮಾಜಿಕ ಮತ್ತು ಭೌತಿಕವಲ್ಲದ ವಸ್ತುಗಳನ್ನೊಳಗೊಂಡ ಪ್ರಾಕೃತಿಕ ಪರಿಸರವನ್ನು ತಿಳಿಯುವುದು; ಎರಡನೆಯದು, ಈ ಪ್ರಕಾರದ ಪರಿಸರದೊಂದಿಗೆ ಪ್ರಕೃತಿ ಸಹಜವಾದ ಸಂವೇದನೆಯನ್ನು ಹೊಂದಿರುವುದು.

ಭಾಷೆಯೆಂಬುದು ಪರಿಸರವನ್ನು ಗ್ರಹಿಸಲು ನೆರವಾಗುವುದಲ್ಲದೆ ಆಯಾ ಜನಪದದ ವಿಶಿಷ್ಟ ಸಂಸ್ಕೃತಿಯ ಬಗ್ಗೆಯೂ ತಿಳುವಳಿಕೆಯನ್ನು ಕೊಡುತ್ತದೆ. ಯಾವುದೇ ಒಂದು ಸಮುದಾಯದ ಭೌತಿಕ ಮತ್ತು ತಾಂತ್ರಿಕಾಧಾರಿತ ಸಂಸ್ಕೃತಿ ಸರಳವಾಗಿದ್ದರೂ ಸಹ ಆ ಜನಪದದ ಭಾಷೆಯ ಮೂಲಕ ನಮಗೆ ಆ ಸಂಸ್ಕೃತಿಯ ಅಗಾಧವಾದ ಗ್ರಾಹ್ಯಶಕ್ತಿಗಳೂ ಗೊತ್ತಾಗುತ್ತದೆ. ಈ ಅರ್ಥದಲ್ಲಿ ಪ್ರತಿಯೊಂದು ಭಾಷೆಯು ಸಂಸ್ಕೃತಿಯಿಂದ ಅಗಾಧವಾಗಿ ಪ್ರಭಾವಿತವಾಗಿರುತ್ತದೆ.

ಭಾಷೆಯು ಸಂಸ್ಕೃತಿಯ ಒಂದು ಭಾಗ, ಅಷ್ಟೆ ಅಲ್ಲ, ಇಡೀ ಸಂಸ್ಕೃತಿಯೇ ಭಾಷೆಯಲ್ಲಿ ರೂಪಿತವಾಗಿರುತ್ತದೆ ಇಲ್ಲವೆ ರಚಿತವಾಗಿರುತ್ತದೆ, ಭಾಷೆಗಳಲ್ಲಿ ಅಂತರ್ಗತವಾಗಿರುವ ವೈವಿಧ್ಯತೆಯು ಸಂಸ್ಕೃತಿಗಿಂತ ವ್ಯಾಪಕವೂ ಮತ್ತು ಉನ್ನತವೂ ಆಗಿರುತ್ತದೆ. ಭಾಷೆಗಳಲ್ಲಿಯ ಪರಸ್ಪರ ಸಂಬಂಧವು ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಸ್ವಾಯತ್ತತೆಯನ್ನು ಹೊಂದಿರುತ್ತದೆ. ಈ ಕಾರಣದಿಂದ ಪ್ರತಿಯೊಂದು ಭಾಷೆಯು ಸಂಸ್ಕೃತಿಯಿಂದ ಭಿನ್ನವಾಗಿ ಕ್ರಿಯಾಶೀಲವಾಗಿರಲು ಸಾಧ್ಯ.

ಒಂದು ವೇಳೆ ಒಮ್ಮೆ ಯಾವುದೇ ಒಂದು ಜನಾಂಗವು ತನ್ನ ಭಾಷೆಯನ್ನು ಕಳೆದುಕೊಂಡು ಬಿಟ್ಟರೆ ಆ ಭಾಷೆಯ ಜನಾಂಗದ ಭೌತಿಕ ಪಳಿಯುಳಿಕೆಗಳು ನಮಗೆ ದೊರೆತರೂ ಸಹ ಕಳೆದುಹೋದ ಆ ಭಾಷೆಯನ್ನು ಪುನರುಜ್ಜೀವನಗೊಳಿಸಲು ಸಾಧ್ಯವಿಲ್ಲ.

(ಸಾಭಾರ-ಏಷಿಯನ್ / ಫೆಸಿಪಿಕ್ ಬುಕ್ ಡೆವಲಪ್‌ಮೆಂಟ್ ತ್ರೈಮಾಸಿಕ.)

ಅನು-ಸು.ಕಾ

* * *

ಆದರ್ಶ ಪ್ರಾಂಶುಪಾಲ–ಪಿ. ಎಸ್. ಕಾರಂತ

–ಶಂಕರಪ್ಪ

ದಕ್ಷಿಣ ಕನ್ನಡ ಜಿಲ್ಲೆಯ ವಿದ್ಯಾಭ್ಯಾಸ ಕ್ರಮ ಬಹಳ ಉತ್ತಮವಾದುದು. ಇಂದಿಗೂ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಗಳಲ್ಲಿ ಉಡುಪಿ. ದಕ್ಷಿಣ ಕನ್ನಡ ಜಿಲ್ಲೆಗಳೇ ಪ್ರಥಮ ಸ್ಥಾನದಲ್ಲಿರುತ್ತವೆ. ಇದಕ್ಕೆ ಅಲ್ಲಿನ ಶಿಕ್ಷಣದ ರೀತಿ ಮತ್ತು ಹೋಂ ವರ್ಕ್ ಕಾರಣವೆಂದು ಹೇಳಬಹುದು.

ಸಾಮಾನ್ಯವಾಗಿ ಕ್ಯಾಜುಯಲ್ ಲೀವ್ ಮುಂಚೆಯೇ ಅರ್ಜಿ ಹಾಕಬೇಕೆಂದು ಪ್ರಾಂಶುಪಾಲರುಗಳು ಹೇಳುತ್ತಾರೆ. ಆದರೆ ನಮ್ಮ ಪ್ರಾಂಶುಪಾಲರು "ಕ್ಯಾಜುಯಲ್ ಎಂದರೆ ಆಕಸ್ಮಿಕ. ಮೊದಲೇ ಹೇಗೆ ಗೊತ್ತಾಗುತ್ತೆ ? ಆಕಸ್ಮಿಕವಾಗಿ ಏನೋ ಅವಗಢ ಆದರೆ ಮುಂಚೆ ಗೊತ್ತಾಗುವುದು ಹೇಗೆ? ನಂತರ ಅರ್ಜಿ ಕೊಡಿ" ಎನ್ನುತ್ತಿದ್ದರು. ಒಮ್ಮೆ ನಾನು ರಜೆ ಅರ್ಜಿಯನ್ನು ಬರೆದು ಅವರೆದುರಿನಲ್ಲಿ ನಿಂತೆ. ಅವರು ಏನೋ ಬರೆಯುತ್ತಾ ಕಾರ್ಯಪ್ರವೃತ್ತರಾಗಿದ್ದರು. ನನ್ನನ್ನು ನೋಡಿ "ಶಂಕರಪ್ಪನವರೇ ಯಾಕೆ ನಿಂತಿದ್ದೀರಿ? ನನ್ನ ಕೆಲಸ ಮಾಡುತ್ತಾ ಇದ್ದೇನೆ. ನಿಮಗೂ ಕೆಲಸ ಇದ್ದೇ ಇರುತ್ತದೆ. ನೀವು ನನ್ನ ಎದುರಿಗೆ ನಿಂತುಕೊಳ್ಳುವುದು ಏಕೆ? ರಜೆ ಅರ್ಜಿಯನ್ನು ಅಧ್ಯಾಪಕರ ಅಟೆಂಡೆನ್ಸ್ ರಿಜಿಸ್ಟರಿನಲ್ಲಿಡಿ. ನಾನು ನೋಡಿ ರಜೆ ಗುರ್ತು ಹಾಕುತ್ತೇನೆ" ಎಂದರು. ಕೆಲವು ಪ್ರಾಂಶುಪಾಲರು ಮೊದಲೇ ಸಿ.ಎಲ್. ಅರ್ಜಿ ಹಾಕಲಿ, ನನ್ನನ್ನು ಕಂಡು ಅರ್ಜಿ ಕೊಡಲಿ ಎಂದು ಬಯಸುತ್ತಾರೆ. ಆದರೆ ಈ ನಮ್ಮ ಪ್ರಾಂಶುಪಾಲರು ಮಾದರಿಯಾದವರು.

ಯಾರಿಗಾದರೂ ಹೆಚ್ಚಿನ ರಜೆ ಬೇಕಾದರೆ ಪಡೆಯಬಹುದು. ಕೂಡಲೇ ಮಂಜೂರು ಮಾಡುತ್ತಿದ್ದರು. ಆದರೆ ಒಂದೇ ಷರತ್ತು. ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದು. ಮಾಡಬೇಕಾದ ಪಾಠವನ್ನು ವಿಶೇಷ ತರಗತಿಯನ್ನು ನಡೆಸಿ ಪಾಠ ಮಾಡಬೇಕು. ಹಾಗಾದರೆ ರಜೆ ಮಂಜೂರು ಮಾಡುತ್ತಿದ್ದರು.

ಒಮ್ಮೆ ವಿದ್ಯಾರ್ಥಿ ವೇತನ ಬಂತು. ಒಬ್ಬ ಬಡ ಹುಡುಗ ಮತ್ತು ಒಬ್ಬ ಶ್ರೀಮಂತ ಹುಡುಗ ಇಬ್ಬರು ಅರ್ಜಿ ಹಾಕಿದ್ದರು. ಅಕಸ್ಮಾತ್ತಾಗಿ ಶ್ರೀಮಂತ ಹುಡುಗನಿಗೆ ಸ್ಕಾಲರ್‌ಶಿಪ್ ಬಂತು. ಬಹುಶಃ ಶಿಫಾರಸ್ ಮಾಡಿಸಿರಬಹುದು. ಬಡ ಹುಡುಗನಿಗೆ ಬರಲಿಲ್ಲ. ಅದಕ್ಕೆ ನಮ್ಮ ಪ್ರಾಂಶುಪಾಲರು ಬಹಳ ಬೇಸರಗೊಂಡರು. ಆ ಇಬ್ಬರು ಹುಡುಗರ ಮನೆ, ಆಸ್ತಿ, ಅವರ ಸ್ಥಿತಿಗತಿ ಎಲ್ಲವನ್ನೂ ನೋಡಿಕೊಂಡು ಆ

ಶ್ರೀಮಂತ ಹುಡುಗನನ್ನು ಕರೆಸಿ, “ನೀನು ಇಂಥವರ ಮಗನಲ್ಲವೇ? ನಿಮಗೆ ಅಲ್ಲಿ ತೋಟ, ಗದ್ದೆ ಸ್ವಂತದ್ದು ಇದೆಯಲ್ಲವೇ? ನಿಮ್ಮ ದೊಡ್ಡ ಮಹಡಿ ಮನೆ ಇಂತಹ ಕಡೆ ಇದೆಯಲ್ಲವೇ? ಆ ಹುಡುಗ ಬಡವ. ಅವನ ತಂದೆ ಬೇರೆಯವರ ಜಮೀನಿನಲ್ಲಿ ಗೇಣಿ ಕೆಲಸ ಮಾಡುತ್ತಾರೆ. ಅವನ ಮನೆ ನೋಡಿದೆಯಾ ಅದು ಗುಡಿಸಲು. ಅವನಿಗೇ ಸ್ಕಾಲರ್‌ಶಿಪ್ ಬರಬೇಕಾಗಿತ್ತು. ಅಕಸ್ಮಾತ್ ನಿನಗೆ ಬಂದಿದೆ. ನಿನ್ನ ತಂದೆಯನ್ನು ಕರೆದುಕೊಂಡು ಬಾ. ಆ ಹುಡುಗನ ತಂದೆ ಬಂದರು. ಇಬ್ಬರಿಗೂ ಸ್ಕಾಲರ್‌ಶಿಪ್ ಹಂಚುತ್ತೇನೆ” ಎಂದು ಹೇಳಿ ಆ ಪೋಷಕರನ್ನು ಒಪ್ಪಿಸಿ, ಇಬ್ಬರಿಗೂ ಸಮಪಾಲು ಬರುವಂತೆ ತಾವೇ ಹಂಚಿದರು. ಬೇರೆ ಕಡೆ ಪ್ರಾಂಶುಪಾಲರು ಇಂಥದೇ ಸಂದರ್ಭದಲ್ಲಿ “ಅವನಿಗೆ ಅದೃಷ್ಟ ಇತ್ತು. ಅವನಿಗೆ ಬಂತು. ಇವನಿಗೆ ಇಲ್ಲ. ನಾನೇನು ಮಾಡಲಾಗುತ್ತೆ” ಎನ್ನುತ್ತಿದ್ದರು. ಆಗ ನನಗೆ ನಮ್ಮ ಆದರ್ಶ ಪ್ರಾಂಶುಪಾಲರ ಹಿರಿಯತನ, ಹೃದಯ ವೈಶಾಲ್ಯತೆ,ಬಡವರ ಬಗ್ಗೆ ಇದ್ದ ಕಳಕಳಿ ಗೊತ್ತಾಯಿತು.

ಒಮ್ಮೆ ಒಂದು ವಿಚಿತ್ರವಾದ ಪ್ರಾಣಿಯೊಂದು ಶ್ರೀ ಸುಬ್ರಹ್ಮಣ್ಯ ಜೋಷಿಯವರ ತೋಟಕ್ಕೆ ಬಂದಿತ್ತು. ಅವರು ಅದನ್ನು ಒಂದು ಚೀಲದಲ್ಲಿ ಹಾಕಿಕೊಂಡು ಬಂದು ನಮ್ಮ ಪ್ರಾಂಶುಪಾಲರಿಗೆ ತೋರಿಸಿದರು. ನಮ್ಮ ಪ್ರಾಂಶುಪಾಲರಿಗೆ ಸಂತೋಷವಾಯಿತು. ಲೈಬ್ರರಿಯಲ್ಲಿದ್ದ ವಿಶ್ವಕೋಶವನ್ನು ತೆಗೆದು ಆ ಪ್ರಾಣಿಯ ಬಗ್ಗೆ ಅದರ ಮೂಲ ಸ್ಥಳ, ವಾಸಸ್ಥಾನ, ಆಹಾರ, ಅಪಾಯದ ಸಂದರ್ಭದಲ್ಲಿ ಅದು ತನ್ನ ಶರೀರವನ್ನು ಮುದುರಿಕೊಂಡು ಚೆಂಡಿನಾಕಾರಕ್ಕೆ ಆಗುವುದು ಎಲ್ಲವನ್ನೂ ಓದಿ ತಿಳಿದರು. ಒಂದೊಂದೇ ತರಗತಿಯ ವಿದ್ಯಾರ್ಥಿಗಳನ್ನು ಕರೆದು ಅವರನ್ನೂ ಸುತ್ತಲೂ ಕೂಡಿಸಿಕೊಂಡು ಆ ಪ್ರಾಣಿಯ ಬಗ್ಗೆ, ಅದು ಚಿಪ್ಪಿನ ಹಂದಿ, ಕಾಡುಪ್ರಾಣಿ, ಅದರ ಬಗ್ಗೆ ಮತ್ತು ಅಪಾಯದ ಸಂದರ್ಭದಲ್ಲಿ ತನ್ನನ್ನು ಹೇಗೆ ರಕ್ಷಿಸಿಕೊಳ್ಳುತ್ತದೆ ಮುಂತಾದ ವಿಚಾರಗಳನ್ನು ಎಲ್ಲಾ ತರಗತಿಯ ವಿದ್ಯಾರ್ಥಿಗಳಿಗೂ ಒಂದು ದಿನವೆಲ್ಲಾ ವಿವರಿಸಿದರು. ಇನ್ನು ೪-೫ ವರ್ಷಕ್ಕೆ ನಿವೃತ್ತರಾಗಲ್ಲಿದ್ದರು. ಮಕ್ಕಳಿಗೆ ತಿಳಿಸಬೇಕೆಂಬ ಎಷ್ಟು ಹಂಬಲ! ಇನ್ನು ಇವರು ಅಧ್ಯಾಪಕರಾಗಿದ್ದಾಗ ಎಷ್ಟು ಶ್ರದ್ಧೆಯಿಂದ ಪಾಠ ಮಾಡಿರಬಹುದು ಎಂದು ಯೋಚಿಸಿದೆ.

ಶಂಕರನಾರಾಯಣದಲ್ಲಿ ಸಿಂಡಿಕೇಟ್ ಬ್ಯಾಂಕ್ ಒಂದೇ ಇತ್ತು. ನಮ್ಮ ಪ್ರಾಂಶುಪಾಲರು ಮ್ಯಾನೇಜರನ್ನು ಕಂಡು “ನಾವು ೧೬ ಜನ ಅಧ್ಯಾಪಕವರ್ಗದವರು ನಿಮ್ಮಲ್ಲಿ ಎಸ್.ಬಿ. ಅಕೌಂಟ್ ಮಾಡುತ್ತೇವೆ. ಪೇ ಬಿಲ್ ನಿಮ್ಮ ಮುಖಾಂತರ ಕಳುಹಿಸುತ್ತೇವೆ. ಒಂದು ಷರತ್ತು. ಪ್ರತಿ ತಿಂಗಳ ಒಂದನೇ ತಾರೀಖು ನಮಗೆ

ಸಂಬಳ ಕೊಡಬೇಕು" ಎಂಬುದು. ಇಷ್ಟೊಂದು ಉಪಾಧ್ಯಾಯರು ಅಕೌಂಟ್ ಮಾಡುತ್ತಾರಲ್ಲಾ ಅಂತ ಮ್ಯಾನೇಜರ್ ಒಪ್ಪಿದರು. ಆದರೆ ಒಮ್ಮೆ ಬ್ಯಾಂಕಿನವರ ಯಾವುದೋ ಲೋಪದಿಂದ ಒಂದು ತಿಂಗಳು ೧೫ನೇ ತಾರೀಖು ಸಂಬಳ ಬಂತು. ಆಗ ಮ್ಯಾನೆಜರರು ೧೫ ದಿನಗಳ ಬಡ್ಡಿಯನ್ನು ಹಾಕುತ್ತಾರೆ ಎಂದು ಬ್ಯಾಂಕಿನಲ್ಲಿ ಮಾತಾಡುತ್ತಿದ್ದ. ವಿಷಯ ನಮ್ಮ ಪ್ರಾಂಶುಪಾಲರ ಕಿವಿಗೆ ಬಿತ್ತು. ಅದಕ್ಕವರು "ನನಗೆ ಕಾನೂನು ಗೊತ್ತು. ನಮ್ಮ ಸಂಬಳದಲ್ಲಿ ಒಂದು ಬಿಡಿಗಾಸು ಹಿಡಿಯುವ ಅವಕಾಶ ಬ್ಯಾಂಕಿನವರಿಗಿಲ್ಲ. ನಾವು ಬಿಲ್ಲನ್ನು ಸರಿಯಾಗಿ ಮಾಡಿ ಕಳುಹಿಸಿದ್ದೇವೆ. ಬ್ಯಾಂಕಿನವರೇ ಮಾಡಿದ ಒಂದು ತಪ್ಪಿನಿಂದ ಬಿಲ್ ವಾಪಸ್ ಬಂದಿದೆ. ಅದಕ್ಕವರೇ ಜವಾಬ್ದಾರರು. ನಮಗೆ ಬಡ್ಡಿ ಹಾಕಿ ನೋಡಲಿ, ಆಗ ವ್ಯವಸ್ಥೆಯನ್ನೇ ಬದಲಾಯಿಸಿ ನೇರವಾಗಿ ಟ್ರೆಜರಿಯಿಂದ ತರುವ ವ್ಯವಸ್ಥೆ ಮಾಡುತ್ತೇನೆ" ಎಂದರು. ಅದಕ್ಕೆ ಬ್ಯಾಂಕಿನ ಮ್ಯಾನೇಜರು ಹೆದರಿ ಬಡ್ಡಿಯನ್ನು ಹಾಕಲಿಲ್ಲ. ಮತ್ತೊಮ್ಮೆ ಆ ಮ್ಯಾನೇಜರನ್ನೇ ಶಾಲೆಗೆ ಕರೆಸಿ ಅವರಿಂದ ಆಟೋಟ ಸ್ಪರ್ಧೆಯ ಉದ್ಘಾಟನೆ ಮಾಡಿಸಿ ಹಾರ ಹಾಕಿ, ಉಪಚಾರ ಕೂಟ ನಡೆಸಿ ಸನ್ಮಾನಿಸಿದರು.

ನಾನು ವಾರ್ಷಿಕ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳನ್ನು ಕಂಠಪಾಠ ಸ್ಪರ್ಧೆಗೆ, ಗಮಕ ಸ್ಪರ್ಧೆಗೆ, ದೇವರ ನಾಮ ಸ್ಪರ್ಧೆಗೆ ತಯಾರು ಮಾಡುತ್ತಿದ್ದೆ. ಆ ಸಾರಿ ಜಿಲ್ಲಾ ಮಟ್ಟದಲ್ಲೂ ನಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಪ್ರಥಮ ಬಹುಮಾನ ಬಂತು. ನಮ್ಮ ಪ್ರಾಂಶುಪಾಲರು. "ಇದುವರೆವಿಗೆ ಗಮಕ, ದೇವರನಾಮ ಸ್ಪರ್ಧೆಗಳಲ್ಲಿ ನಮ್ಮ ಶಾಲೆಗೆ ಬಹುಮಾನ ಬರುತ್ತಿರಲಿಲ್ಲ. ಶಂಕರಪ್ಪನವರು ಬಂದ ಮೇಲೆ ಜಿಲ್ಲಾ ಮಟ್ಟದಲ್ಲಿ ನಮ್ಮ ಶಾಲೆಗೆ ಬಹುಮಾನ ಬಂತು" ಎಂದು ಶ್ರಮವಹಿಸುವವರನ್ನು ಪ್ರಶಂಸಿಸಿ ಪ್ರೋತ್ಸಾಹ ಕೊಡುತ್ತಿದ್ದರು.

ವರ್ಷಕೊಮ್ಮೆ ಅಧ್ಯಾಪಕರಿಗೆ ಹಬ್ಬದ ಮುಂಗಡ ರೂ ೧೦೦೦ ಕೊಡುತ್ತಿದ್ದರು. ನಂತರ ಪ್ರತಿ ತಿಂಗಳೂ ಸಂಬಳದಲ್ಲಿ ೧೦೦ ರೂ ಹಿಡಿಯುತ್ತಿದ್ದರು. ಒಮ್ಮೆ ಆ ಮುಂಗಡದ ಸಮಯ ಬಂತು. ನಾನು ಮೈಸೂರಿನಲ್ಲಿ ಹಳೆಯ ಮನೆಯನ್ನು ಕೊಂಡು, ಅದನ್ನು ಹೊಸದಾಗಿ ಕಟ್ಟಿಸುತ್ತಿದ್ದೆ. ಅದು ಅವರಿಗೆ ಗೊತ್ತಿತ್ತು. ನನಗೆ ಹಣದ ಅವಶ್ಯಕತೆ ಇತ್ತು. ಪ್ರಾಂಶುಪಾಲರು ನನ್ನನ್ನು ಕಂಡು "ಹಬ್ಬದ ಮುಂಗಡ ಪ್ರೌಢಶಾಲೆಯ ಉಪಾಧ್ಯಾಯರಿಗೆ ಮಾತ್ರ, ಉಪನ್ಯಾಸಕರಿಗೆ ಇಲ್ಲ. ಪ್ರೌಢಶಾಲಾ ಉಪಾಧ್ಯಾಯರೊಬ್ಬರು ತನಗೆ ಮುಂಗಡ ಬೇಡ ಎನ್ನುತ್ತಿದ್ದಾರೆ. ನೀವು ಅವರಿಂದ ಪಡೆಯಬಹುದು. ನಾನು ಅವರಿಗೆ ಹೇಳುತ್ತೇನೆ. ಅವರ ಹೆಸರಿಗೆ ಮುಂಗಡ ಮಂಜೂರು ಆಗುತ್ತದೆ. ನಿಮಗೆ ಕೊಡುತ್ತಾರೆ. ನೀವು ಪ್ರತಿ ತಿಂಗಳೂ ೧೦೦ ರೂ. ಅವರಿಗೆ ಕೊಟ್ಟುಬಿಡಿ" ಎಂದರು. ಕೊನೆಯಲ್ಲಿ "ಅವರು

ಬಡ್ಡಿಯನ್ನು ಕೇಳಿದರೆ ಬಡ್ಡಿ ಕೊಡುವುದು ಬೇಡ. ಸರ್ಕಾರ ಈ ಹಣಕ್ಕೆ ಬಡ್ಡಿ ಹಾಕುತ್ತಿಲ್ಲ. ನೀವೂ ಕೊಡಬೇಡಿ". ಎಂದರು.

ಒಬ್ಬ ಅನನುಭವಿ ಗುಮಾಸ್ತ ದೊಡ್ಡಪ್ಪ ಎಂಬವರು ಹೊಸದಾಗಿ ಆ ಶಾಲೆಗೆ ಬಂದರು. ಅವರು ರಾಯಚೂರಿನವರು. ಬಹಳ ದೂರದಿಂದ ಬಂದಿದ್ದರು. ಆಫೀಸಿನ ಕೆಲಸ ಏನೂ ಬರದು. ಅವರಿಗೆ ಪ್ರಾಂಶುಪಾಲರು ಎಲ್ಲವನ್ನೂ ಹೇಳಿಕೊಟ್ಟರು. ೮೦೦ ವಿದ್ಯಾರ್ಥಿಗಳಿದ್ದ ಪದವಿ ಪೂರ್ವ ಕಾಲೇಜಿಗೆ ಒಬ್ಬರೇ ಗುಮಾಸ್ತರು. ಅವರಿಗೂ ಮದುವೆ ಆಯಿತು. ಮಗು ಆಯಿತು. ಹೆಂಡತಿ ಮರಣ ಹೊಂದಿದರು. ಎರಡನೇ ಹೆಂಡತಿಯನ್ನು ಇಲ್ಲಿಗೆ ಕರೆತರುವಂತಿರಲಿಲ್ಲ. ವೃದ್ಧ ಮಾತಾಪಿತರು. ಒಟ್ಟಿನಲ್ಲಿ ಬಹಳ ತೊಂದರೆಯಲ್ಲಿದ್ದರು. ನಮ್ಮ ಪ್ರಾಂಶುಪಾಲರು ಅವರಿಂದ ಅರ್ಜಿ ಪಡೆದು ಅನೇಕ ಸಾರಿ ಶಿಫಾರಸ್ಸು ಮಾಡಿ ವರ್ಗ ಮಾಡಿಸಿದರು. ವರ್ಗದ ಆರ್ಡರ್ ಬಂತು. ಅವರ ಸ್ವಂತ ಊರಾದ ರಾಯಚೂರಿಗೇ ವರ್ಗವಾಯಿತು. ಆದರೆ ಅವರ ಬದಲಿಗೆ ಬೇರೆಯವರು ಬರಲಿಲ್ಲ.

ನಮ್ಮ ಪ್ರಾಂಶುಪಾಲರು "ನಿಮಗೆ ನಿಮ್ಮ ಊರಿಗೇ ವರ್ಗವಾಯಿತು ಬಹಳ ಸಂತೋಷ. ಹೋಗಿ ಬನ್ನಿ. ೧ನೇ ತಾರೀಖು ಸಂಬಳ ತೆಗೆದುಕೊಂಡು ರಿಲೀವ್ ಆಗಿರಿ" ಅದಕ್ಕೆ ಆ ಗುಮಾಸ್ತರು "ನಾನು ಹೇಗೆ ರಿಲೀವ್ ಆಗಲಿ ಸಾರ್! ನನ್ನ ಬದಲು ಯಾರನ್ನೂ ಹಾಕಲಿಲ್ಲವಲ್ಲಾ, ಶಾಲೆಯ ಕೆಲಸ ಹೇಗೆ ನಡೆಯಬೇಕು" ಎಂದರು. ಅದಕ್ಕೆ ನಮ್ಮ ಪ್ರಾಂಶುಪಾಲರು "ನಿಮ್ಮ ತೊಂದರೆ ನನಗೆ ಗೊತ್ತಿದೆ. ನೀವು ರಿಲೀವ್ ಆಗಿ ನಿಮ್ಮೂರಿಗೆ ಹೋಗಿ ನಾನು ಬೇರೆಯವರನ್ನು ವರ್ಗ ಮಾಡುವಂತೆ ಆಫೀಸಿಗೆ ಬರೆಯುತ್ತೇನೆ. ಬೇರೆ ಗುಮಾಸ್ತರು ಬರುವವರೆಗೆ ನಾನೇ ಎಲ್ಲಾ ಕೆಲಸಗಳನ್ನೂ ಮಾಡುತ್ತೇನೆ. ನನಗೆ ಕೆಲಸವೆಲ್ಲಾ ಗೊತ್ತು. ನೀವು ಬಹಳ ಕಷ್ಟ ಪಟ್ಟಿದ್ದೀರಿ. ಈಗ ವರ್ಗವಾಗಿದೆ ನಿಮ್ಮೂರಿಗೆ, ಹೋಗಿ ಬನ್ನಿ" ಎಂದರು. ಆ ಗುಮಾಸ್ತರು ಕಣ್ಣೀರು ಸುರಿಸುತ್ತಾ ಅವರ ಪಾದಗಳ ಮೇಲೆ ಬಿದ್ದು ನಮಸ್ಕರಿಸಿದರು. ಇಂತಹ ಉತ್ತಮ ಗುಣಗಳ ಗಣಿ ನಮ್ಮ ಪ್ರಾಂಶುಪಾಲರು. ಆ ಸಂದರ್ಭದಲ್ಲಿ ನನಗೂ ಬಂತು. ಆನಂದ ಬಾಷ್ಪ.

ನಾನು ವರ್ಗವಾಗಿ ಶಂಕರನಾರಾಯಣಕ್ಕೆ ಬಂದು ತಿಂಗಳಾದರೂ ನನ್ನ ಎಲ್.ಪಿ.ಸಿ. ಸಂಬಳ ಎಷ್ಟು ಎಂಬ ಬಗ್ಗೆ ಹೊಳೆನರಸೀಪುರದಿಂದ ಬರಲೇ ಇಲ್ಲ. ನಮ್ಮ ಪ್ರಾಂಶುಪಾಲರು ಪತ್ರ ವ್ಯವಹಾರ ಮಾಡಿದರು. ಶಂಕರನಾರಾಯಣದಲ್ಲಿ ಒಂದನೇ ತಾರೀಖು ಸಂಬಳ ಬರುತ್ತಿತ್ತು. ಎಲ್ಲರಿಗೂ ಬಂತು . ನನಗೆ ಇಲ್ಲ. ಮೈಸೂರಿನಲ್ಲಿರುವ ನನ್ನ ಕುಟುಂಬಕ್ಕೆ ಹಣ ಕಳುಹಿಸಬೇಕು ಏನು ಮಾಡಲಿ ಆಗ ಪ್ರಾಂಶುಪಾಲರು ನನ್ನನ್ನು ಕಂಡು "ನಮಗೆಲ್ಲಾ ಸಂಬಳ

ಬಂತು. ನಿಮಗೆ ಸಂಬಳ ಕೊಡಲು ಎಲ್.ಪಿ.ಸಿ.ಬರಲೇ ಇಲ್ಲವಲ್ಲಾ. ನಾನು ಒತ್ತಾಯ ಪೂರ್ವಕವಾಗಿ ಪತ್ರ ಬರೆದಿದ್ದೇನೆ. ನಿಮಗೆ ತೊಂದರೆಯಾಯಿತಲ್ಲಾ . ನೋಡಿ ನಮ್ಮದೊಂದು ಪೋಷಕರ ಉಪಾಧ್ಯಾಯರ ಸಂಘದಲ್ಲಿ ಹಣವಿದೆ. ನಿಮಗೆಷ್ಟು ಬೇಕೋ ತೆಗೆದುಕೊಳ್ಳಿ. ನಿಮ್ಮ ಸಂಬಳ ಬಂದಾಗ ಕೊಡಿ. ಬಡ್ಡಿ ಕೊಡಬೇಕಾದ್ದಿಲ್ಲ" ಎಂದರು. ನಾನು ಅವರು ಹೇಳಿದಂತೆಯೇ ಹಣವನ್ನು ಪಡೆದು ಸಂಬಳ ಬಂದ ಮೇಲೆ ಹಿಂದಿರುಗಿಸಿದೆ.

ಹೊಳೆನರಸೀಪುರದಿಂದ ನನ್ನ ಎಸ್. ಆರ್.ಬಂತು. ಅದನ್ನು ಚೆನ್ನಾಗಿ ಪರಿಶೀಲಿಸಿ ರಜಾ ಲೆಕ್ಕಾಚಾರ ತುಂಬಾ ತಪ್ಪಾಗಿದೆ ಎಂದು ಸರಿಪಡಿಸಿದರು. ಮುನ್ಸಿಪಲ್ ಹೈಸ್ಕೂಲನ್ನು ವಶಪಡಿಸಿಕೊಂಡ ಬಗ್ಗೆ ಎಸ್. ಆರ್. ನಲ್ಲಿ ಬರದೇ ಇರಲಿಲ್ಲ. ಅದನ್ನು ೧೯೭೦ನೇ ಇಸವಿಯಲ್ಲಿ ನಾನು ಕೆಲಸ ಮಾಡುತ್ತಿದ್ದ ಹುಣಸೂರು ಪ್ರೌಢಶಾಲೆಗೆ ಕಳುಹಿಸಿ ಅದನ್ನು ಎಸ್.ಆರ್.ನಲ್ಲಿ ನಮೂದಿಸುವಂತೆ ಮಾಡಿಸಿ ತರಿಸಿದರು.

ಶಾಲೆಯ ಜವಾನ ಕುಡುಕ. ಅವನಿಗೆ ಹೆಂಡತಿ ಮಕ್ಕಳಿದ್ದರು. ವಾಸಕ್ಕೆ ಒಂದು ಗುಡಿಸಲು. ಅವನೂ ನಮ್ಮೊಡನೆ ನಿವೃತ್ತನಾದ. ನಮ್ಮ ಪ್ರಾಂಶುಪಾಲರು ನಿವೃತ್ತಿಯ ಸಂದರ್ಭದಲ್ಲಿ ಬಂದ ಹಣವನ್ನು ಅವನಿಗೆ ಕೊಡದೆ ಅವನ ಹೆಂಡತಿಯನ್ನು ಕರೆಸಿ ಅವರಿಗೆ ಒಂದು ಜಮೀನು, ಮನೆ ಕೊಡಿಸಿದರು. ಅವನಿಗೇ ಹಣವನ್ನು ಕೊಟ್ಟಿದ್ದರೆ ಕುಡಿತಕ್ಕೆ ಹಾಕಿ ಹಾಳು ಮಾಡಿಕೊಳ್ಳುತ್ತಿದ್ದ. ನಮ್ಮ ಪ್ರಾಂಶುಪಾಲರು ಅವರಿಗೆ ಒಂದು ನೆಲೆ ಮಾಡಿಕೊಟ್ಟರು. ಪುಣ್ಯಭಾಗಿಗಳಾದರು.

ನಮ್ಮ ಪ್ರಾಂಶುಪಾಲರ ಮಾವನ ಮನೆಯವರು ಭಾರೀ ಶ್ರೀಮಂತರು. ಅವರದು ಬೆಂಗಳೂರಿನ ಮಲ್ಲೇಶ್ವರಂನಲ್ಲಿ ಒಂದು ದೊಡ್ಡ ಹೋಟೆಲು ಇತ್ತು. ಈಗಲೂ ಇದೆ. ಅವರುಗಳು ನಮ್ಮ ಪ್ರಾಂಶುಪಾಲರನ್ನು "ಬೆಂಗಳೂರಿಗೆ ಬನ್ನಿ ವಾಸಕ್ಕೆ ಮನೆಯನ್ನು ಕೊಡುತ್ತೇವೆ. ನಿಮಗೆ ಸರ್ಕಾರಿ ನೌಕರಿಯಲ್ಲಿ ಎಷ್ಟು ಸಂಬಳ ಬರುತ್ತದೆಯೋ ಅದಕ್ಕಿಂತಲೂ ಹೆಚ್ಚು ಹಣ ಬರುವಂತೆ ಮಾಡುತ್ತೇವೆ. ನೀವು ಬೆಂಗಳೂರಿಗೇ ಬಂದು ನಮ್ಮೊಡನೆಯೇ ಸುಖವಾಗಿರಿ" ಎಂದು ಪ್ರಾರ್ಥಿಸಿದರಂತೆ. ಆದರೆ ನಮ್ಮ ಪ್ರಾಂಶುಪಾಲರು "ನನಗೆ ಇದೇ ಸಾಕು. ನಾವು ಸೌಖ್ಯವಾಗಿದ್ದೇವೆ. ಬೆಂಗಳೂರಿಗೆ ಬರುವ ಇಷ್ಟವಿಲ್ಲ" ಎಂದು ಹೇಳಿದರೆಂದು ಬೇರೆಯವರು ಹೇಳಿದ್ದನ್ನು ಕೇಳಿದ್ದೇನೆ.

ಒಮ್ಮೆ ಜಿಲ್ಲೆಯ ಡಿ.ಡಿ.ಪಿ.ಐ.ರವರು ನಮ್ಮ ಪ್ರಾಂಶುಪಾಲರಿಗೆ ಒಂದು ಅರ್ಜಿಯ ಫಾರಂ ಕಳುಹಿಸಿ ಇದನ್ನು ಭರ್ತಿ ಮಾಡಿ ಕಳುಹಿಸಿ. ನಿಮಗೆ ರಾಷ್ಟ್ರಪ್ರಶಸ್ತಿಗೆ ಶಿಫಾರಸ್ಸು ಮಾಡುತ್ತೇನೆ ಎಂದು ಪತ್ರ ಬರೆದಿದ್ದರು. ಅವರು ವಾರ್ಷಿಕ ಇನ್ಸ್‌ಪೆಕ್ಷನ್ನಿಗೆ ನಮ್ಮ ಶಾಲೆಗೆ ಬಂದು ಎಲ್ಲಾ ಉತ್ತಮವಾದ ವ್ಯವಸ್ಥೆಯನ್ನು ನೋಡಿ ಹೋಗಿದ್ದರು.

ಶಾಲೆಯ ಪ್ರಗತಿಯ ಬಗ್ಗೆ ಪ್ರಶಂಸಿದ್ದರು. ಫಲಿತಾಂಶ ಎಸ್.ಎಸ್.ಎಲ್.ಸಿ.ಶೇಕಡಾ೧೦೦, ಪಿ.ಯು.ಸಿ.೧೦೦ ಅವರಲ್ಲಿ ಮುಕ್ಕಾಲು ಭಾಗ ವಿದ್ಯಾರ್ಥಿ ವಿದ್ಯಾರ್ಥಿನಿಯರು ಡಿಸ್ಟಿಂಕ್ಷನ್‌ನಲ್ಲಿ ಪಾಸಾಗುತ್ತಿದ್ದರು. ಡಿ.ಡಿ.ಪಿ.ಐ.ರವರು ಬಹಳ ಸಂತೋಷಗೊಂಡು ಶಾಲೆಯ ವ್ಯವಸ್ಥೆಯನ್ನು ನೋಡಿ ತೃಪ್ತರಾಗಿ ಪ್ರಾಂಶುಪಾಲರಿಗೆ ರಾಷ್ಟ್ರ ಪ್ರಶಸ್ತಿ ಕೊಡಿಸಲು ಪ್ರಯತ್ನಿಸಿದರು. ಇಂತಹ ಸಂದರ್ಭದಲ್ಲಿ ಬೇರೆ ಪ್ರಾಂಶುಪಾಲರು ಬಹಳ ಸಂತೋಷಪಡುತ್ತಿದ್ದರೇನೋ. ಆದರೆ ನಮ್ಮ ಪ್ರಾಂಶುಪಾಲರು ಆ ಅರ್ಜಿಯ ಫಾರಂ ಅನ್ನು ಹಿಂದಕ್ಕೆ ಕಳುಹಿಸಿ "ತಾವು ನನ್ನ ಕಾರ್ಯದಕ್ಷತೆಯನ್ನು ನೋಡಿ, ಶಾಲೆಯ ಉತ್ತಮ ವ್ಯವಸ್ಥೆಯನ್ನು ನೋಡಿ ಸಂತೋಷಗೊಂಡು ನನಗೆ ಪ್ರಶಸ್ತಿ ಕೊಡಿಸಲು ಇಷ್ಟಪಟ್ಟಿದ್ದೀರಿ. ಬಹಳ ಸಂತೋಷ. ತಾವು ಶಿಫಾರಸ್ಸು ಮಾಡಿ ಪ್ರಶಸ್ತಿ ಕೊಡಿಸಿದರೆ ಸಂತೋಷವಾಗಿ ಸ್ವೀಕರಿಸುತ್ತೇನೆ. ಆದರೆ ನನಗೆ ಪ್ರಶಸ್ತಿ ಕೊಡಿ ಎಂದು ಅರ್ಜಿ ಹಾಕಲು ನಾನು ಇಷ್ಟಪಡುವುದಿಲ್ಲ. ಅರ್ಜಿ ಹಾಕಿ ಪ್ರಶಸ್ತಿ ಪಡೆಯುವ ಇಚ್ಛೆ ನನಗಿಲ್ಲ. ಆ ಕ್ರಮವೇ ತಪ್ಪು" ಎಂದು ಪ್ರತ್ಯುತ್ತರ ಬರೆದರು.

ನಿವೃತ್ತನಾದ ನನಗೆ ಎಂಟು ಕಡೆ ಸನ್ಮಾನ ನಡೆಯಿತು. ಕಾಲೇಜಿನಲ್ಲಿ ಅದ್ದೂರಿಯಾದ ಸನ್ಮಾನ ನಡೆಯಿತು. ಸುಮಾರು ೪೫ ಉಡುಗೊರೆಗಳು ಬಂದಿದ್ದವು. ದಕ್ಷಿಣ ಕನ್ನಡದ ಜನ ವಿದ್ಯಾವಂತರಿಗೂ, ವಿದ್ಯೆಗೂ ಎಷ್ಟು ಬೆಲೆ ಕೊಡುತ್ತಾರೆಂದು ಆಗ ನನಗೆ ಗೊತ್ತಾಯಿತು. ಅದು ನನ್ನ ಪೂರ್ಣ ಸೇವಾವಧಿಯಲ್ಲಿ ಅವಿಸ್ಮರಣೀಯವಾದುದು.

ಆ ನಮ್ಮ ಆದರ್ಶ ಪ್ರಾಂಶುಪಾಲರು ಯಾರು ಗೊತ್ತೇ? ಅವರೇ ಶ್ರೀ ಪಿ.ಎಸ್.ಕಾರಂತರು. ಉಡುಪಿ ಜಿಲ್ಲೆಯ ಕುಂಭಾಸಿಯ ಸಮೀಪದ ಕೊರವಡಿ ಗ್ರಾಮದಲ್ಲಿ ನಿವೃತ್ತ ಜೀವನವನ್ನು ನಡೆಸುತ್ತಿದ್ದಾರೆ. ಅವರ ಆದರ್ಶ ಆಗಾಗ್ಗೆ ನನ್ನ ನೆನಪಿಗೆ ಬರುತ್ತಿರುತ್ತದೆ. ನಾನು ೧೯೪೬ ರಿಂದ ೧೯೮೭ರವರೆಗೆ ಪ್ರಾಥಮಿಕ, ಪ್ರೌಢಶಾಲೆಗಳಲ್ಲಿ ಶಿಕ್ಷಕನಾಗಿಯೂ, ಪದವಿ ಪೂರ್ವ ಕಾಲೇಜಿನಲ್ಲಿ ಉಪನ್ಯಾಸಕನಾಗಿಯೂ ಸೇವೆ ಸಲ್ಲಿಸಿದ್ದೇನೆ. ಅನೇಕ ಮುಖ್ಯೋಪಾಧ್ಯಾಯರನ್ನೂ, ಪ್ರಾಂಶುಪಾಲರನ್ನೂ ನೋಡಿದ್ದೇನೆ ಅವರೊಡನೆ ಕಾರ್ಯ ನಿರ್ವಹಿಸಿದ್ದೇನೆ. ನಾನು ನಿವೃತ್ತನಾಗಿಯೇ ೨೩ ವರ್ಷಗಳಾದವು. ಆಗಾಗ್ಗೆ ಆ ಮಹಾನುಭಾವರಾದ ಪ್ರಾಂಶುಪಾಲರನ್ನು ನೆನಸಿಕೊಂಡರೆ ಒಡನೆಯೇ ಕಣ್ಣೆದುರಿಗೆ ನಿಲ್ಲುತ್ತಾರೆ. ನಾನು ಮನಸ್ಸಿನಲ್ಲಿಯೇ ಅವರಿಗೆ ನಮನ ಸಲ್ಲಿಸುತ್ತೇನೆ.

* * *

ಜನಪದ ನಿಲಯದ ಅಂತರಂಗದಲ್ಲಿ........೨೦

–ಸುರೇಂದ್ರ ಕೌಲಗಿ



ನಾನು ಬಡವಿ ಆತಾ ಬಡವ
ಒಲವೆ ನಮ್ಮ ಬದುಕು
ಬಳಸಿಕೊಂಡೆವದನೆ ನಾವು
ಅದುಕು, ಇದಕು, ಎದುಕು
–ಬೇಂದ್ರೆ

ಮೇಲುಕೋಟೆಯಲ್ಲಿ ನಾನು ವಾಸವಾಗಿದ್ದ ನನ್ನ ಪಕ್ಕದ ಮನೆಯ ಪೇಷ್ಕಾರ ಶ್ರೀನಿವಾಸಮೂರ್ತಿಯವರ ಪತ್ನಿ ನಾಗಮ್ಮ ಕೃಷ್ಣರಾಜಪೇಟೆಯಲ್ಲಿ ಮಹಿಳಾ ಸಮಾಜದ ಅಂಗವಾಗಿ ಶಿಶುವಿಹಾರವೊಂದನ್ನು ನಡೆಸುತ್ತಿದ್ದರು. ಭವಿಷ್ಯದಲ್ಲಿ ನನ್ನ ಪತ್ನಿಯಾಗಲಿದ್ದ ಗಿರಿಜಾ ಆ ಶಿಶುವಿಹಾರದಲ್ಲಿ ಅಧ್ಯಾಪಕಿಯಾಗಿ ಕೆಲಸ ಮಾಡುತ್ತಿದ್ದಳು. ಆದರೆ ಶಿಶುವಿಹಾರದ ಕೆಲಸದಲ್ಲಿ ತರಬೇತಿ ಹೊಂದಿರಲಿಲ್ಲ. ಆದ್ದರಿಂದ ಮಹಿಳಾ ಸಮಾಜದವರು ಗಿರಿಜಾಳನ್ನು ಮೈಸೂರಿನಲ್ಲಿದ್ದ ಜಗದಾಂಬಾ ಶಿಶುವಿಹಾರ ಅಧ್ಯಾಪಕಿಯರ ತರಬೇತಿ ಸಂಸ್ಥೆಗೆ ತರಬೇತಿಗಾಗಿ ಕಳುಹಿಸಿದರು. ಗಿರಿಜಾ ತನ್ನ ಚಿಕ್ಕವಯಸ್ಸಿನಿಂದಲೇ ಚೂಟಿಯಾದ ಮತ್ತು ಧೈರ್ಯಸ್ಥೆಯಾದ ಹಾಗೂ ವ್ಯವಹಾರಗಳಲ್ಲಿ ಕುಶಾಗ್ರಮತಿಯಾದ ಹುಡುಗಿಯಾಗಿದ್ದಳು. ಮನೆಗೆಲಸಗಳಲ್ಲಿ ಚಟುವಟಿಕೆಯುಳ್ಳವಳೂ ಆಗಿದ್ದಳು. ಕೆಲಸದಲ್ಲಿಯ ಅವಳ ನಿಷ್ಠೆ ಮತ್ತು ವ್ಯವಹಾರಿಕ ಬುದ್ಧಿ ದೊಡ್ಡವರನ್ನು ಆಶ್ಚರ್ಯಚಕಿತರಾಗುವಂತೆಯೂ, ಮೆಚ್ಚುವಂತೆಯೂ ಮಾಡುತ್ತಿದ್ದವು. ಆದರೆ ಅವಳಿಗೆ ವಿದ್ಯಾಭ್ಯಾಸ ಮಾಡಿಸುವ ವಾತಾವರಣ ಅವಳ ಮನೆಯಲ್ಲಿ ಮತ್ತು ಮನೋ ಇಚ್ಛೆ ಅವಳ ಹಿರಿಯರಲ್ಲಿ ಇರಲಿಲ್ಲವಾದ್ದರಿಂದ ಮಾಧ್ಯಮಿಕ ಶಾಲೆಯವರೆಗೆ ಮಾತ್ರ ಓದಲು ಸಾಧ್ಯವಾಯಿತು. ಗಿರಿಜಳ ಮನೆಯಲ್ಲಿ ಯಾರೂ ಹೆಚ್ಚು ವಿದ್ಯಾಭ್ಯಾಸ ಮಾಡಿರಲಿಲ್ಲ. ತಾಯಿ ಮೀನಾಕ್ಷಮ್ಮ ಕೇವಲ ಅಕ್ಷರಸ್ಥೆ ಮಾತ್ರ. ತಂದೆ ರಾಮಸ್ವಾಮಿಯವರು ಆ ಕಾಲದ ಲೋಯರ್ ಸೆಕೆಂಡರಿ ಪರೀಕ್ಷೆ ಪಾಸಾಗಿದ್ದರು. ಆದರೆ ಅವರು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಹೆಚ್ಚು ಪ್ರಾವಿಣ್ಯತೆ ಪಡೆದಿದ್ದರು. ಆದ್ದರಿಂದ ಅವರಿಗೆ ಪಾಂಡವಪುರ ತಾಲ್ಲೋಕಿನ ಮಹದೇಶ್ವರಪುರ, ಲಕ್ಷ್ಮೀಸಾಗರ, ಇಂಗಲಗುಪ್ಪೆ ಮುಂತಾದ ಗ್ರಾಮಗಳ ಶಾನುಭೋಗಿಕೆ ಸಿಕ್ಕಿತ್ತು. ಅಷ್ಟರಲ್ಲಿ ಎರಡನೆ ಮಹಾಯುದ್ಧ ಪ್ರಾರಂಭವಾಗಿದ್ದಿದುರಿಂದ ರಾಮಸ್ವಾಮಿಯವರು ಮಿಲಿಟರಿಗೆ ಸೇರಿಕೊಂಡರು. ಅವರು ಸಾಧಾರಣವಾಗಿರುವುದಕ್ಕಿಂತ ಹೆಚ್ಚು ಎತ್ತರವಾಗಿದ್ದರು, ತೆಳ್ಳನೆಯಶರೀರ, ಕನ್ನಡ, ಇಂಗ್ಲೀಷ್ ಚೆನ್ನಾಗಿ ಓದಿ ಬರೆಯಬಲ್ಲವರಾಗಿದ್ದರಿಂದ ಅವರಿಗೆ ಮಿಲಿಟರಿಯಲ್ಲಿ ಆಫೀಸ್ ಕೆಲಸ ದೊರೆಯಿತು. ಮುಂದೆ ಯುದ್ಧ ಮುಗಿದ ಮೇಲೆ

ಅವರಿಗೆ ತಾಲ್ಲೋಕು ಕಛೇರಿಯಲ್ಲಿ ಗುಮಾಸ್ತಗಿರಿ ದೊರೆಯಿತು. ಆದ್ದರಿಂದ ಅವರು ನಿವೃತ್ತರಾದ ಮೇಲೂ ಮಿಲ್ಟ್ರಿರಾಮಸ್ವಾಮಿ ಎಂದೇ ಅವರ ಹೆಸರು ಪ್ರಚಲಿತವಾಯಿತು. ರಾಮಸ್ವಾಮಿಯವರು ತಮ್ಮ ಮುದ್ದಾದ ಇಂಗ್ಲೀಷ್ ಮತ್ತು ಕನ್ನಡ ಬರಹಕ್ಕೆ ಹಾಗೂ ದಾಕ್ಷಿಣ್ಯವಿಲ್ಲದ ಮಾತುಗಳಿಗೆ ಮತ್ತು ಯಾರ ಮುಲಾಜಿಲ್ಲದ ಸ್ವಭಾವಕ್ಕೆ, ಪ್ರಾಮಾಣಿಕತೆಗೆ ಹೆಸರಾಗಿದ್ದರು. ಯಾವ ಮೇಲ್ಪಟ್ಟ ಅಧಿಕಾರಿಗೂ ಹೆದರುತ್ತಿರಲಿಲ್ಲ. ಬದಲಿಗೆ ರಾಮಸ್ವಾಮಿಯವರ ಕಟ್ಟುನಿಟ್ಟಾದ ವ್ಯವಹಾರಗಳಿಂದ ಮೇಲಾಧಿಕಾರಿಗಳೇ ಅವರಿಗೆ ಹೆದರುತ್ತಿದ್ದರು. ಅದು ಆಗಿನ ಕಾಲದಲ್ಲಿ ವಿಶೇಷವಾದ ಸಂಗತಿಯಾಗಿತ್ತು. ಅವರ ಬಿಗಿ ಜೀವನ ಶೈಲಿಯನ್ನು ನೆನೆಯುವ ಜನ ಈಗಲೂ ಇದ್ದಾರೆ. ಅವರು ಸಂಸಾರದ ವಿಷಯಗಳ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ತಾವಾಯಿತು, ತಮ್ಮ ಕೆಲಸವಾಯಿತು, ಬಿಡುವಿದ್ದಾಗ ಪಕ್ಕದಲ್ಲಿದ್ದ ರಾಮಮಂದಿರಕ್ಕೆ ಹೋಗಿ ಬರುವುದು ಮತ್ತು ಅಲ್ಲಿಯೇ ಕುಳಿತು ಸ್ವಾಮಿಶಿವಾನಂದರು ಬರೆದ ಇಂಗ್ಲೀಷ್ ಭಾಷೆಯಲ್ಲಿಯ ಆಧ್ಯಾತ್ಮಿಕ ಪುಸ್ತಕಗಳನ್ನು ಓದುವುದು ಅವರ ನಿತ್ಯರೂಢಿಯಾಗಿತ್ತು. ತಿಂಗಳ ಸಂಬಳವನ್ನು ಹೆಂಡತಿ ಮೀನಾಕ್ಷಮ್ಮನವರ ಕೈಗಿತ್ತು ನಿಶ್ಚಿಂತರಾಗಿರುತ್ತಿದ್ದರು. ರಾಮಸ್ವಾಮಿಯವರು ತಮ್ಮ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಗಮನಹರಿಸಲಿಲ್ಲ. ಪಿತ್ರಾರ್ಜಿತವಾದ ಯಾವ ಆಸ್ತಿಯೂ ಇರಲಿಲ್ಲ. ಮೂರುಜನ ಗಂಡು ಮಕ್ಕಳು, ಮೂರುಜನ ಹೆಣ್ಣುಮಕ್ಕಳು. ತಾವು ಇಬ್ಬರು ಗಂಡ-ಹೆಂಡತಿ, ಹೀಗೆ ಒಟ್ಟು ಎಂಟು ಜನರ ಜೀವನ ನಿರ್ವಹಣೆ ಆಗಬೇಕಿತ್ತು. ಬರುವ ಅಲ್ಪಸಂಬಳದಲ್ಲಿಯೇ ಇಡೀ ಕುಟುಂಬದ ನಿರ್ವಹಣೆ ಆಗಬೇಕಾದ್ದರಿಂದ ಮನೆಯಲ್ಲಿ ಬಡತನ ಇದ್ದುದು ಸಹಜವಾಗಿತ್ತು. ಆದರೆ ತಮ್ಮ ಜೀವಿತದ ಕೊನೆಯವರೆಗೂ ಗೌರವದಿಂದಲೇ ಜೀವನ ನಡೆಸಿದರು. ಇಂಥ ಕುಟುಂಬದಲ್ಲಿ ಜನಿಸಿದ ಗಿರಿಜಾ ಸಹಜವಾಗಿಯೇ ಬಡತನದ ಜೀವನವೆಂದರೇನು ಎಂಬುದನ್ನು ಬಹಳ ಅನುಭವಿಸಿಯೇ ತಿಳಿದವಳಾಗಿದ್ದಳು. ಜೊತೆಗೆ ತಂದೆ ರಾಮಸ್ವಾಮಿಯವರ ನಿರ್ದಾಕ್ಷಿಣ್ಯ ಮತ್ತು ಕಟ್ಟುನಿಟ್ಟಿನ ಸ್ವಭಾವ ಹಾಗೂ ತಾಯಿ ಮೀನಾಕ್ಷಮ್ಮನವರ ಧಾರಾಳತನದ ಸ್ವಭಾವ ಎರಡನ್ನು ಮೈಗೂಡಿಸಿಕೊಂಡಿದ್ದಳು. ಮಿನಾಕ್ಷಮ್ಮನವರ ಧಾರಾಳತನ ಎಷ್ಟಿತ್ತೆಂದರೆ ಆಗ ತಾನೆ ಕೃಷ್ಣರಾಜ ಪೇಟೆಯಲ್ಲಿ ಆಗಿನ ಶಾಸಕ ಬೋಮ್ಮೇಗೌಡರ ಪ್ರಯತ್ನದಿಂದಾಗಿ ಪ್ರಾರಂಭವಾಗಿದ್ದ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಓದುತ್ತಿದ್ದ ಅನೇಕ ಬ್ರಹ್ಮಚಾರಿ ವಿದ್ಯಾರ್ಥಿಗಳಿಗೆ ಅನ್ನ ಮತ್ತು ಸಾರನ್ನು ಉಚಿತವಾಗಿ ಕೊಡುತ್ತಿದ್ದರು. ಈ ರೀತಿಯಾಗಿ ಅವರ ಕೈಯಿಂದ ಅನ್ನ ಪಡೆದ ಅನೇಕ ಯುವ ವಿದ್ಯಾರ್ಥಿಗಳು ಮುಂದೆ ದೊಡ್ಡ ಕೆಲಸಕ್ಕೆ ಸೇರಿಕೊಂಡರು. ಅವರು ಈಗಲೂ ಮಿನಾಕ್ಷಮ್ಮನವರ ಅಡಿಗೆಯ ರುಚಿಯನ್ನು ಮತ್ತು ಅವರ ಮಾತೃ ಹೃದಯವನ್ನು ನೆನೆದುಕೊಳ್ಳುತ್ತಾರೆ. ಮಹಿಳಾ ಸಮಾಜದ ಅಧ್ಯಕ್ಷೆ ಜಯಲಕ್ಷ್ಮೀದೇವಿಯವರು ಶಿಶುವಿಹಾರದ ಕೆಲಸವನ್ನು ಕರೆದುಕೊಟ್ಟಾಗ ಅದು ಒಂದು ವರವಾಗಿಯೇ ಬಂತು. ಆದರೆ ಆ ಸಂಬಳ ಕೇವಲ ೫೦ರೂ! ಮಹಿಳಾ ಸಮಾಜದವರು

ಗಿರಿಜಾಳನ್ನು ಮೈಸೂರಿಗೆ ಶಿಶುವಿಹಾರದ ಶಿಕ್ಷಕಿಯ ತರಬೇತಿಗಾಗಿ ಕಳಿಸಿದ ಒಂದು ವರ್ಷದ ಅವಧಿಯ ವೇತನವನ್ನು ಮುಂದೆ ಕೆಲಸಕ್ಕೆ ಹಾಜರಾದ ಮೇಲೆ ಪ್ರತಿ ತಿಂಗಳು ನಿರ್ದಿಷ್ಟ ಮೊಬಲಗನ್ನು ವೇತನದಲ್ಲಿ ಹಿಡಿದುಕೊಂಡು ಮುಂಗಡವನ್ನು ವಜಾಮಾಡಿಕೊಂಡರು! ಮೈಸೂರಿನ ಪರಿಚಿತರ ಮನೆಯಲ್ಲಿದ್ದು ಕೊಂಡು ಈ ರೀತಿ ಬಹಳ ಕಷ್ಟಪಟ್ಟು ಶಿಶುವಿಹಾರದ ಅಧ್ಯಾಪಕಿಯ ಟ್ರೈನಿಂಗ್ ಮಾಡಿಕೊಂಡಳು. ಆದರೆ ಈ ಸಣ್ಣ ವೇತನಕ್ಕೆ ಪ್ರತಿಯಾಗಿ ಗಿರಿಜಾ ಮಹಿಳಾಸಮಾಜದ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದ ರೀತಿ ಮತ್ತು ಶ್ರಮ ಆ ವೇತನಕ್ಕೆ ಎರಡು–ಮೂರರಷ್ಟು ಇದ್ದಿತು. ಆದ್ದರಿಂದ ಮಹಿಳಾ ಸಮಾಜದ ವಾರ್ಷಿಕೋತ್ಸವವೇ ಇರಲಿ, ಕಂಡೆನ್ಸ್ಡ್ ಕೋರ್ಸಿನ ವಯಸ್ಕ ಹುಡುಗಿಯರ ಮೇಲ್ವಿಚಾರಣೆಯೇ ಇರಲಿ, ಶಿಶುವಿಹಾರದ ಕಾರ್ಯಕ್ರಮಗಳೇ ಇರಲಿ ಅಲ್ಲೆಲ್ಲ ಗಿರಿಜಳ ಹಾಜರಾತಿ ಮತ್ತು ಸೇವೆ ಅನಿವಾರ್ಯವೆಂಬ ಸ್ಥಿತಿ ಮಹಿಳಾ ಸಮಾಜದಲ್ಲಿ ಉಂಟಾಗಿತ್ತು. ಆದ್ದರಿಂದ ಸಮಾಜದ ಅಧ್ಯಕ್ಷೆ ಜಯಲಕ್ಷ್ಮಮ್ಮ ಮತ್ತು ಕಾರ್ಯದರ್ಶಿನಿ ನಾಗಮ್ಮನವರಿಗೆ ಗಿರಿಜಾ ಅಚ್ಚುಮೆಚ್ಚಿನ ಕಾರ್ಯಕರ್ತೆಯಾಗಿದ್ದಳು. ನಾಗಮ್ಮನವರಿಗೆ ನನ್ನ ಪರಿಚಯವಾದಾಗಿನಿಂದ ಅವರ ಮನಸ್ಸಿನಲ್ಲಿ ಗಿರಿಜಾಳೊಂದಿಗೆ ನನ್ನ ವಿವಾಹದ ಕುರಿತಾದ ವಿಚಾರಗಳು ಬರಲು ಪ್ರಾರಂಭಿಸಿದವು. ಮೇಲುಕೋಟೆಯಲ್ಲಿ ನಾನು ಹಮ್ಮಿಕೊಳ್ಳಬೇಕೆಂದಿದ್ದ ಕೆಲಸದ ವಿಚಾರಗಳನ್ನು ಹಾಗೂ ನನ್ನ ಕುಟುಂಬದ ಹಿನ್ನೆಲೆಯನ್ನು ತಿಳಿದಿದ್ದ ನಾಗಮ್ಮನವರು ನನ್ನ ಮತ್ತು ಗಿರಿಜಳ ಮದುವೆಯ ಸಾಧ್ಯತೆ ಕುರಿತಾದ ಮಾತನ್ನು ಗಿರಿಜಳ ಮುಂದೆ ಪ್ರಸ್ತಾಪಿಸಿದರೆಂದು ಕಾಣುತ್ತದೆ. ವಿವಾಹದ ಬಗ್ಗೆ ನಾಗಮ್ಮನವರ ಈ ಸಲಹೆಯನ್ನು ಕೃಷ್ಣರಾಜಪೇಟೆಯಲ್ಲಿದ್ದ ತನ್ನ ತಂದೆ–ತಾಯಿಯವರಿಗೆ ತಿಳಿಸಿದಳು. ನಾಗಮ್ಮನವರು ವಿವಾಹದ ಸಂಬಂಧ ಕುದುರಿಸುವಲ್ಲಿ ಮಧ್ಯಸ್ಥಗಾರರಾಗಿದ್ದರಿಂದ ಮತ್ತು ನಾಗಮ್ಮನವರ ಬಗ್ಗೆ ಗಿರಿಜಳ ತಂದೆ–ತಾಯಿಗಳಿಗೆ ಅಪಾರವಾದ ಗೌರವ ಮತ್ತು ವಿಶ್ವಾಸ ಇದ್ದುದರಿಂದ ಗಿರಿಜಳ ತಂದೆ–ತಾಯಿಗಳು ನನ್ನ ಕೆಲಸ, ಸಂಪಾದನೆ, ವಿದ್ಯಾಭ್ಯಾಸ ಆಸ್ತಿ ಇತ್ಯಾದಿ ಯಾವ ವಿಷಯಗಳನ್ನೂ ವಿವರವಾಗಿ ತಿಳಿಯುವ ಗೋಜಿಗೆ ಹೋಗದೆ ವಿವಾಹದ ಈ ಸಲಹೆಗೆ ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದು ನನ್ನ ಮಟ್ಟಿಗಂತೂ ವಿಶೇಷವಾದ ಸಂಗತಿಯಾಗಿತ್ತು. ಇನ್ನು ಈ ವಿಷಯವನ್ನು ದೂರದ ಸಾಂಗಲಿಯಲ್ಲಿದ್ದ ನನ್ನ ತಂದೆ–ತಾಯಿಗಳಿಗೆ ತಿಳಿಸುವ ಹಾಗೂ ಅವರ ಒಪ್ಪಿಗೆಯನ್ನು ಪಡೆಯುವ ಕೆಲಸ ನನ್ನದಾಗಿತ್ತು. ನನ್ನ ತಂದೆ–ತಾಯಿಗಳು ತಾವು ನಿಷ್ಕರ್ಷಿಸಿದ ರೀತಿಯಲ್ಲಿ ನನ್ನ ಮದುವೆಯಾಗಬೇಕೆಂದು ಬಯಸುವವರಾಗಿದ್ದರಿಂದ ಈ ವಿಚಾರದಲ್ಲಿ ನನಗೆ ಭಯ ಕಾಡುತ್ತಿತ್ತು. ಮದುವೆಯಾಗುವವರೆಗಿನ ಮುಂದಿನ ದಿನಗಳು ಆತಂಕಕಾರಿಯಾಗಿಯೇ ಇದ್ದವು.

–ಮುಂದುವರಿಯುವುದು.......

ವಾಚಕ ಮಿತ್ರರಲ್ಲಿ ವಿನಂತಿ.

ಜನಪದ ವಿಚಾರ ಪ್ರಸ್ತುತ ವಿಷಯಗಳಿಗೆ ಸಂಬಂಧಿಸಿದಂತೆ ಲೇಖನಗಳನ್ನು ಆಹ್ವಾನಿಸುತ್ತದೆ. ಆಸಕ್ತರು ಪತ್ರಿಕೆಯನ್ನು ಸಂಪರ್ಕಿಸಬೇಕಾಗಿ ವಿನಂತಿ.

ತಾವು ದಯಮಾಡಿ ಜನಪದ ವಿಚಾರದ ವಾರ್ಷಿಕ ಚಂದಾ 100/- ರೂ. ಮನಿಆರ್ಡರ್ ಮೂಲಕ ಕಳುಹಿಸಿ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

-ಪ್ರಕಾಶಕರು



ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ *(-ಸಂಪಾದಕರು)*

KA-SKMND-470-2003-05
Regd. no. KAR/KAN/2000/3820

ತೆರೆದ–ಅಂಚೆ

TO,

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ®. Melkote. Dist- mandya – 571431
Phone : 08236 – 298754 e-mail : janapada@yahoo.com